ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ ೬ ಸಂಚಿಕೆ 45
೭ ಸೆಪ್ಟೆಂಬರ್ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಆಂಧ್ರ, ಪಶ್ಚಿಮ ಬಂಗಾಳ, ಬೊಂಬಾಯಿ, ಉತ್ತರ ಪ್ರದೇಶಗಳಲ್ಲಿ ಚುನಾವಣೆ ನಡೆಯುವದಾದರೆ

ಕೇರಳದಲ್ಲೂ ಚುನಾವಣೆಗಳನ್ನು ನಡೆಸಲು ಸಿದ್ಧ

"ಕಮ್ಯೂನಿಸ್ಟ್ ಸರಕಾರ ಅಧಿಕಾರಕ್ಕೆ ಬಂದ ನಿಮಿಷದಿಂದಲೇ ಅದನ್ನು ಕಿತ್ತು ಹಾಕಲು ಪ್ರತಿಪಕ್ಷದವರು ಎಡೆಬಿಡದೆ ಪ್ರಯತ್ನಿಸಿದ್ದಾರೆ. ಅದೆಲ್ಲ ವಿಫಲವಾದ್ದರಿಂದ ಈ ಅಪಪ್ರಚಾರ ಮುಂದೊರೆದಿದೆ. ಕೇಂದ್ರ ಕೈಯಿಕ್ಕಬೇಕೆಂದು ಕೇಳಲಾಗುತ್ತಿದೆ. ಈ ಸರಕಾರ ಆರು ತಿಂಗಳೂ ಉಳಿಯಲಾರದೆಂದು ಕಾಂಗ್ರೆಸ್ಸಿನ ಮತ್ತು ಪಿ.ಎಸ್.ಪಿ.ಯ ನಾಯಕರು ಹೇಳುತ್ತಿದ್ದರು. ಅದಕ್ಕೆ ಕಾರಣವಿದೆ. ಅವರ ಸರಕಾರಗಳು ಕೇರಳದಲ್ಲಿ ಅಷ್ಟು ಕಾಲವೂ ಉಳಿದಿರಲಿಲ್ಲ. ಆದರೆ ಅವರ ಆಶೆಗಳೆಲ್ಲ ಮಣ್ಣುಗೂಡಿದುವು. ಕಮ್ಯೂನಿಸ್ಟ್ ಸರಕಾರವನ್ನು ಕಿತ್ತುಹಾಕಲು ಸಾಧ್ಯವಿಲ್ಲ ಎಂದು ಅವರಿಗೆ ಖಚಿತವಾಯಿತ.."

ಕ್ವಿಲೋನ್‌ನ ಸಮೀಪದಲ್ಲಿ ಜರಗಿದ ಗೋಡಂಬಿ (ಗೇರುಬೀಜ) ಕೆಲಸಗಾರರ ಒಂದು ಸಭೆಯಲ್ಲಿ ಕೇರಳ ಮುಖ್ಯಮಂತ್ರಿ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಭಾಷಣಮಾಡುತ್ತ ಹೇಳಿದರು. ಅವರು ಹೇಳಿರುವ ಕೆಲವು ಸ್ವಾರಸ್ಯ ವಿಷಯಗಳನ್ನಿಲ್ಲಿ ಸಂಗ್ರಹಿಸಿ ಕೊಡಲಾಗಿದೆ.



ಕಾಂ॥ ಇ. ಎಂ. ಎಸ್.

"ಕಮ್ಯೂನಿಸ್ಟ್ ಎಸೆಂಬ್ಲಿ ಪಾರ್ಟಿಯೊಳಗೆ ಭಿನ್ನಾಭಿಪ್ರಾಯ, ಒಳಜಗಳ ಮತ್ತು ಮಂತ್ರಿಮಂಡಲಕ್ಕೆ ಇದಿರಾದ ಕಚ್ಚಾಟ ಇದೆಯೆಂದು ಅವರು ಪ್ರಚಾರ ಮಾಡಿದರು—ಅವರ ಪಾರ್ಟಿಗಳಲ್ಲಿ ಇರುವಂತೆ! ಅದು ಕಟ್ಟು ಕತೆಯೆಂದು ಸ್ಪಷ್ಟವಾದಾಗ, ಕೆಲವು ಕಮ್ಯೂನಿಸ್ಟ್ ಎಸೆಂಬ್ಲಿ ಸದಸ್ಯರನ್ನು ಒಂದೆರಡು ಲಕ್ಷ ರೂಪಾಯಿ ಲಂಚಕೊಟ್ಟು ಕೊಳ್ಳಲು ಪ್ರಯತ್ನಿಸಿದರು. ಅದೂ ಫಲಕಾರಿಯಾಗಲಿಲ್ಲ. ದೇವಿಕುಳಂ ಉಪಚುನಾವಣೆಯಲ್ಲಾದರೂ ಗೆಲ್ಲಬಹುದೆಂದು ಆಶಿಸಿದರು. ಅದೂ ಸಿರಾಶೆಯಲ್ಲಿ ಕೊನೆಗೊಂಡಿತು. ಅನೇಕ 'ಹೋರಾಟ'ಗಳನ್ನು ನಡೆಸಿದರು; ಯಾವುದೊಂದು ಜಯಪ್ರದವಾಗಲಿಲ್ಲ.

ಕೇರಳ ಸರಕಾರವನ್ನು ಕಿತ್ತು ಹಾಕಿ ಅಧ್ಯಕ್ಷರ ಆಳ್ವಿಕೆ ಸ್ಥಾಪಿಸಬೇಕೆಂದು ಕೇಳಿದರು, ಅದಾಗಲಿಲ್ಲ. ಕೇಂದ್ರ ಸರಕಾರವೊಂದು 'ನಿಷ್ಪಕ್ಷಪಾತ ವಿಚಾರಣೆ'ಯನ್ನಾದರೂ ನಡೆಸಬೇಕೆಂದು ಬೇಡಿದರು. ಅದೂ ಸಾಧಿಸಲಿಲ್ಲ. ವಿಚಾರಣೆ ನಡೆಸಬೇಕಾದ ಎಲ್ಲ ವಿಷಯಗಳ ಬಗ್ಗೆ ಕೇರಳ ಸರಕಾರವೇ ನಿಷ್ಪಕ್ಷಪಾತ ವಿಚಾರಣೆಗೆ ಏರ್ಪಾಡು ಮಾಡಿದೆ. ಅದಲ್ಲದೆ, ಕಾಂಗ್ರೆಸ್ ಪಕ್ಷದ ಕೇಂದ್ರ ಸರಕಾರವು ಕಮ್ಯೂನಿಸ್ಟ್ ಸರಕಾರವಿರುವ ಕೇರಳದಲ್ಲಿ ನಡೆಸುವ ವಿಚಾರಣೆಯು 'ನಿಷ್ಪಕ್ಷಪಾತ' ವಾಗಿರಲು ಸಾಧ್ಯವಿಲ್ಲ.

ಸ್ವರೂಪದರ್ಶನ!

"ಕಮ್ಯೂನಿಸ್ಟ್ ಪಕ್ಷದಲ್ಲಿ ಶಿಸ್ತು ಐಕ್ಯತೆಯಿದೆ. ಅವರಿಗೆ ಒಂದು ದೊಡ್ಡ ಧ್ಯೇಯವಿದೆ. ....ಈಗ ಕಾಂಗ್ರೆಸ್ಸ್ ಸಂಸ್ಥೆಯಲ್ಲಿ ಏನಾದರೂ ಕೆಲಸ ಮಾಡಬೇಕೆಂದರೆ ವಿವಾದ, ವ್ಯಾಜ್ಯ-ದ್ವೇಷ ಉಂಟಾಗುತ್ತಿದೆ. ಕಾಂಗ್ರೆಸ್ಸಿನವರು ಅನುಸರಿಸುವ ಮಾರ್ಗ ಉನ್ನತವಾಗಿರಬೇಕು. ಊಟ ಹಾಕಿ ಓಟು ತೆಗೆದುಕೊಳ್ಳುವುದು ಅಕೃತ್ಯ.

ಸ್ವಾರ್ಥ ಸಾಧನೆಗಾಗಿ ಸಂಸ್ಥೆಯ ಸದಸ್ಯತ್ವವನ್ನು ಅಕ್ರಮವಾಗಿ ಹೆಚ್ಚಿಸಿದ ಸಂದರ್ಭಗಳೂ ಉಂಟು. ತಮಗಾಗದವರ ಹಾಳೆಗಳನ್ನೇ ಹರಿದುಹಾಕಲಾಯಿತು. ಇಂಥ ಪ್ರಸಂಗದ ಅನುಭವ ನನಗೂ ಇದೆ."

—ಕೆಂಗಲ್ ಹನುಮಂತಯ್ಯ
(ಬೆಂಗಳೂರಿನ ಕೃಷ್ಣರಾಜೇಂದ್ರ ಮಾರ್ಕೆಟ್ ಮಂಡಲ ಕಾಂಗ್ರೆಸ್ ಆರಂಭೋತ್ಸವದ ಕಾಲಕ್ಕೆ)

ಈಗ ಹೊಸತಾದ ಕೇಳಿಕೆಯೊಂದು ಎದ್ದಿದೆ—ಸಾರ್ವತ್ರಿಕ ಚುನಾವಣೆ ನಡೆಸಬೇಕು! ಆಳುವ ಪಕ್ಷಕ್ಕೆ ಜನರ ಬೆಂಬಲ

[ಕೊನೇ ಪುಟ ನೋಡಿ]

ಪತ್ರಿಕಾ ಮಾರಾಟದ ಹಕ್ಕಿಗೆ ಧಕ್ಕೆ

ಡಾ॥ ಗೋರಿಯವರ ಬಾಡಿಗೆ ಭಂಟರ ಧಾಳಿ

ಬಸ್ ಸ್ಟ್ಯಾಂಡುಗಳು ಅವರ ಹಿರಿಯರ ಆಸ್ತಿಯೆ ?

ತಾ. ೨೯-೮-೫೮ ಮಧ್ಯಾನ್ಹ ಬೆಂಗಳೂರಿನಿಂದ ಮಧುಗಿರಿ ದೊಡ್ಡಬಳ್ಳಾಪುರಗಳತ್ತ ಹೊರಟ್ಟಿದ್ದ ಬಸ್ (ನಂ. 621, ರೂಟ್ ನಂ. 221)ನ ಡ್ರೈವರ್ ಜೀವನ್ ಸಿಂಗ್ ಎಂಬುವನು ಅಲ್ಲಿಯೇ ಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದ ವೈ. ಹೆಚ್. ವೀರಣ್ಣಗೌಡ ಎಂಬವರನ್ನು ಕೂಗಿ "ಸೋವಿಯತ್ ದೇಶ ಇದ್ದರೆ ಕೊಡು" ಎಂದು ಕೇಳಿದ. ವೀರಣ್ಣಗೌಡರು ಪತ್ರಿಕೆಗಳನ್ನು ಕೊಡಲು ಹೋದಾಗ್ಗೆ ಬಾಯಿಗೆ ಬಂದಹಾಗೆ ಬಯ್ಯುತ್ತ ಜೀವನ್ ಸಿಂಗ್ ಅವರನ್ನು ಹೊಡೆಯಲಾರಂಭಿಸಿದ. ಅಷ್ಟರಲ್ಲೇ ಅವನ ತಮ್ಮ ಬಾಲಸಿಂಗ್ ಡ್ರೈವರನೂ ಬೆಲ್ಟ್ ಮತ್ತು ಸಲಾಕೆಗಳನ್ನು ತೆಗೆದುಕೊಂಡು ವೀರಣ್ಣಗೌಡರನ್ನು ಬಲವಾಗಿ ಹೊಡೆಯಲಾರಂಭಿಸಿದುದರಿಂದ ವೀರಣ್ಣಗೌಡರ ಮುಖ ಕಾಲುಗಳಿಗೆ ಗಾಯಗಳಾಗಿ ರಕ್ತ ಚಿಮ್ಮತೊಡಗಿತು.

ಈ ಆಕಸ್ಮಿಕ ಧಾಳಿಗೆ ಕಾರಣವೇನೆಂ

(ಕೊನೇ ಪುಟ ನೋಡಿ)

ಭಾರತ ಕಮ್ಯೂನಿಸ್ಟ್ ಪಾರ್ಟಿ ಬಗ್ಗೆ ಹೊಲ್ಲದ ಮಾತುಗಳನ್ನಾಡಿರುವ

ಕೇಂದ್ರದ ವಾರ್ತಾಶಾಖೆಯ ಕಾರ್ಯದರ್ಶಿಯನ್ನು ದಂಡನೆಗೊಳಪಡಿಸಿ

ಕೇಂದ್ರ ಸರ್ಕಾರದ ಸುದ್ದಿ ಮತ್ತು ಪ್ರಸಾರ ಶಾಖೆಯ ಕಾರ್ಯದರ್ಶಿ ಶ್ರೀ ಆರ್. ಕೆ. ರಾಮಧ್ಯಾನಿ ಐ. ಸಿ. ಎಸ್. ಅವರು ಕಮ್ಯೂನಿಸ್ಟ್ ನಾಯಕ ಕಾಂ॥ ಭೂಪೇಶ್ ಗುಪ್ತ ಎಂ. ಪಿ. ಅವರಿಗೊಂದು ಕಾಗದ ಬರೆದು ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಶ್ರೀಯುತರು ಇತ್ತೀಚೆಗೆ ಹಲವಾರು ಪತ್ರಿಕೆಗಳಿಗೆ (ಕನ್ನಡದಲ್ಲಿ **ಪ್ರಜಾವಾಣಿ** ತಾ. ೧೫—೮—೫೮) ಲೇಖನವೊಂದನ್ನು ಬರೆಯುತ್ತ ಸಮಾಜವಾದೀ ರಾಷ್ಟ್ರಗಳಿಗೂ ಭಾರತ ಕಮ್ಯೂನಿಸ್ಟ್ ಪಾರ್ಟಿಗೂ ಸಂಬಂಧಿಸಿ ಸಲ್ಲದ ಟೀಕೆಗಳನ್ನು ಮಾಡಿದುದೇ ಈ ಪತ್ರ ಬರೆಯಲು ಕಾರಣ.

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಮೇಲೆ ಗಂಭೀರವಾದ ಆಪಾದನೆಗಳನ್ನು ಮಾಡಿದ ಶ್ರೀಯುತರ ವಿಷಯವನ್ನು ಕಾಂ॥ ಭೂಪೇಶ ಗುಪ್ತರು ಇತ್ತೀಚೆಗೆ ಲೋಕ ಸಭೆಯಲ್ಲಿ ಅಲ್ಪ ಕಾಲಾವಧಿಯ ಪ್ರಶ್ನೆಗಳ ಕಾಲಕ್ಕೆ ತಂದು ಈ ಅಧಿಕಾರಿಯ ಈ ನಡತೆಯನ್ನು ಪ್ರಶ್ನಿಸಿದರು.

ಪಾರ್ಲಿಮೆಂಟಿನಲ್ಲಿ

ಆರ್. ಕೆ. ರಾಮಧ್ಯಾನಿ

ಅವರ ಶಿಕ್ಷೆಯ ಪ್ರತಿಧ್ವನಿ

ಕಾಂ॥ ಭೂಪೇಶ ಗುಪ್ತರು ರಾಜ್ಯ ಸಭೆಯ ಅಧ್ಯಕ್ಷರಿಗೆ ಕಾಗದವೊಂದನ್ನು ಬರೆದು ಸರಕಾರವು ಈ ವಿಷಯವನ್ನು ಪರಿಶೀಲಿಸಬೇಕೆಂದು ಕೇಳಿಕೊಂಡಿರುವುದಾಗಿ ತಿಳಿದಿದೆ. ಭಾರತದಲ್ಲಿ ಬ್ರಿಟಿಷ್ ಪಾರ್ಲಿಮೆಂಟರಿ ಪದ್ಧತಿಯನ್ನೇ ಅನುಸರಿಸುವುದರಿಂದ, ಅಲ್ಲಿ ಸರ್ಕಾರದ ಶಾಶ್ವತ ಹುದ್ದೆಗಳಲ್ಲಿರುವವರು ಇಂಥ ಲೇಖನವನ್ನೇನಾದರೂ ಬರೆದಿದ್ದರೆ ಇಡೀ ಸರಕಾರಕ್ಕೆ ಇದರ ಪರಿಣಾಮವಾಗುತ್ತಿತ್ತಲ್ಲದೆ ಇಂಥ ಅಪರಾಧೀ ಅಧಿಕಾರಿಗೆ ಎಚ್ಚರಿಕೆಯ ದಂಡವನ್ನು ವಿಧಿಸುತ್ತಿದ್ದರು ಎಂಬುದಾಗಿ ಭೂಪೇಶ್ ಗುಪ್ತರು ಕಾಗದದಲ್ಲಿ ಹೇಳಿರಬಹುದೆಂದು ತಿಳಿಯಲಾಗಿದೆ.

ಸರಕಾರದ ಒಬ್ಬ ಕೆಳದರ್ಜೆಯ ಅಧಿಕಾರಿಯು ಕೇವಲ ಪೋಲೀಸ್ ವರದಿಗಳಿಂದ ಆಪಾದಿಸಲ್ಪಟ್ಟ ರಾಜಕೀಯ ಒಲವಿನ ಬಗ್ಗೆ ಶಿಕ್ಷೆಗೊಳಗಾಗುವಾಗ ಐ. ಸಿ. ಎಸ್. ಅಧಿಕಾರಿಯೊಬ್ಬರು ಅಪರಾಧದ ಕಾಲಕ್ಕೆ

[ಕೊನೇ ಪುಟ ನೋಡಿ]

ಸಂಪಾದಕೀಯ

ಚೀನದ ವ್ಯವಹಾರದಲ್ಲಿ ಅಮೇರಿಕದ ಅಕ್ರಮ ಪ್ರವೇಶ ಸಲ್ಲದು !

ಪಶ್ಚಿಮ ಏಷ್ಯದ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ, ಅಣು ಆಯುಧ ಸ್ಫೋಟನ ನಿಲ್ಲುವ ಸ್ಥಿತಿ ಸನ್ನಿಹಿತವಾಗಿದೆ. ಭಾರತ-ಪಾಕೀಸ್ಥಾನ ಗಡಿವಿವಾದಗಳ ಬಗ್ಗೆ ಪ್ರಧಾನಿಗಳೊಳಗೆ ಮಾತುಕತೆ ನಡೆಯಲಿದೆ-ಈ ವಾರ್ತೆಗಳು ಇಡೀ ಲೋಕದಲ್ಲಿ ಕಳವಳವನ್ನು ಕಡಿಮೆಮಾಡಿವೆ. ಅದೇ ಸಮಯದಲ್ಲಿ ಕ್ವಿಮೋಯ್ ದ್ವೀಪಗಳಿಂದ ಚಿಯಾಂಗನ ಸೈನ್ಯಗಳನ್ನು ಉಚ್ಚಾಟನೆ ಮಾಡಲು ಜನತಾಚೀನ ಕೈಗೊಂಡಿರುವ ಕ್ರಮವನ್ನು ಕಾರಣವಾಗಿ ಮಾಡಿಕೊಂಡು ಅಮೇರಿಕದ ಯುದ್ಧ ಹಡಗುಗಳು ಆ ಕಡೆಗೆ ಧಾವಿಸುತ್ತಿರುವ ವಾರ್ತೆ ಮತ್ತೆ ವಾತಾವರಣವನ್ನು ಕದಡಿದೆ; ಕೇವಲ ಸ್ಥಳೀಯವಾದ, ತಾತ್ಕಾಲಿಕವಾದ ಮತ್ತು ಚೀನದ ಆಂತರಿಕ ವ್ಯವಹಾರವಾದ ಒಂದು ಪ್ರಶ್ನೆಯಲ್ಲಿ ಅಮೇರಿಕ ಪ್ರವೇಶಿಸಿ ಅದನ್ನೊಂದು ಯುದ್ಧವನ್ನಾಗಿ ಮಾರ್ಪಡಿಸಲು ಹವಣಿಸುತ್ತಿದೆ.

ಕ್ವಿಮೋಯ್ ಮತ್ತು ಮಟ್ಸು ದ್ವೀಪಗಳು ಚೀನದ ಮುಖ್ಯಭೂಮಿಯಿಂದ ಕೇವಲ ಐದು ಮೈಲಿಗಳ ಅಂತರದಲ್ಲಿವೆ. ಆ ದ್ವೀಪಗಳಲ್ಲಿ ಇತ್ತೀಚೆಗೆ ಚಿಯಾಂಗ್ ಕೈಶೇಕ್‌ನ 80,000 ಸೈನಿಕರು ತಳವೂರಿದ್ದಾರೆ. ಚೀನದ ಅಮೋಯ್ ಮತ್ತಿತ್ತರ ಬಂದರುಗಳಿಗೆ ಹಡಗುಗಳು ಬಂದು ಹೋಗದಂತೆ ತಡೆಯುವುದಷ್ಟೇ ಅಲ್ಲ ಆ ನಾಡಿನ ಭದ್ರತೆಗೆನೇ ಇದರಿಂದ ಅಪಾಯವಿದೆ. ಆದುದರಿಂದ, ಚಿಯಾಂಗನ ಸೈನ್ಯಗಳು ಕ್ವಿಮೋಯ್ ಮತ್ತು ಮಟ್ಸು ದ್ವೀಪಗಳಿಂದ ತೊಲಗಬೇಕು, ಅಲ್ಲವಾದರೆ ಸರ್ವನಾಶವನ್ನು ಎದುರಿಸಬೇಕಾಗುವುದು ಎಂದು ಜನತಾಚೀನ ಎಚ್ಚರಿಕೆ ನೀಡಬೇಕಾಯಿತು. ಅಮೇರಿಕದ ಬೆಂಬಲದ ಭರವಸೆಯಿಂದ ಚಿಯಾಂಗನ ಸೈನ್ಯಗಳು ತೊಲಗಲಿಲ್ಲವಾದ್ದರಿಂದ ಜನತಾಚೀನ ಅವುಗಳನ್ನು ಉಚ್ಚಾಟನೆ ಮಾಡಲು ಕ್ರಮವಹಿಸಬೇಕಾಯಿತು.

ಚಿಯಾಂಗ್ ಕೈಶೇಕ್‌ನ 'ರಾಷ್ಟ್ರೀಯ ಚೀನ'ದ ಬಗ್ಗೆ ತಮಗಿರುವ 'ಜವಾಬ್ದಾರಿಯನ್ನು ತಾವು ಕೈಬಿಡಲಾರೆವು ಎಂದು ಅಮೇರಿಕದ ವಕ್ತಾರರು ಅಂದಿದ್ದಾರೆ. ಫರ್ಮೋಸಾದ ಮೇಲೆ ಜನತಾಚೀನ ಧಾಳೀ ನಡೆಸಿದರೆ ತಾವು ಉತ್ತರ ಕೊರಿಯಾದ ಮೇಲೆ ಪ್ರತಿಧಾಳಿ ಮಾಡುವುದಾಗಿ ದಕ್ಷಿಣ ಕೋರಿಯದ ಸೈನಾಧಿಕಾರಿ ಬೆದರಿಕೆ ಹಾಕಿದ್ದಾರೆ. ಅಮೇರಿಕದ ಸೈನ್ಯಾಧಿಕಾರಿಗಳು ಚಿಯಾಂಗ್‌ನ ಸೈನಾಧಿಕಾರಿಗಳೊಡನೆ ಗೂಢಾಲೋಚನೆ ನಡೆಸುತ್ತಿದ್ದಾರೆ.

ಆದರೆ ಅಮೇರಿಕ ಈ ವ್ಯವಹಾರದೊಳಗೆ ಧುಮುಕಿದರೆ, ಅದನ್ನು ಹಿಂಬಾಲಿಸಲು ಬೇರೆ ಯಾವ ದೇಶವೂ ತಯಾರಿಲ್ಲ. ಚಿಯಾಂಗ್‌ನ ಸೈನ್ಯಗಳು ಕ್ವಿಮೋಯ್ ಮಟ್ಸು ದ್ವೀಪಗಳಿಂದ ಹಿಂಜರಿಯುವುದೇ ಒಳ್ಳೆಯದೆಂಬ ಅಭಿಪ್ರಾಯ ಬ್ರಿಟನಿನಲ್ಲಿ ಬಲವಾಗಿದೆ. ಬ್ರಿಟಿಷ್ ಸರಕಾರವೇನೋ ಈ ವಿಷಯದ ಬಗ್ಗೆ 'ಕಾತರತೆ' ವ್ಯಕ್ತಪಡಿಸಿದೆ. ಆದರೆ ಚೀನಾದೊಡನೆ ಘರ್ಷನೆಗೆ ಸಿದ್ಧವಾಗುವುದೆಂದು ತೋರುವುದಿಲ್ಲ.

ಭಾರತ ಸರಕಾರವು ಜನತಾ ಚೀನಕ್ಕೆ ಮನ್ನಣೆ ನೀಡಿದೆ. ನಮ್ಮ ಮಟ್ಟಿಗೆ ಒಂದೇ ಚೀನ ಇರುವುದು—ಜನತಾಚೀನ. ಕ್ವಿಮೋಯ್ ಮಟ್ಸು ದ್ವೀಪಗಳಷ್ಟೇ ಅಲ್ಲ ಫರ್ಮೋಸ ಕೂಡ ಚೀನದ ಪರಮಾಧಿಕಾರಕ್ಕೆ ಸೇರಿದ್ದು. ಆಚಾರ್ಯ ಕೃಪಲಾನಿ, ಅಶೋಕ ಮೆಹತಾರಂಥ ಕೆಲವರಲ್ಲದೆ ಬೇರೆ ಯಾರೂ ಇದನ್ನು ಪ್ರಶ್ನಿಸುವುದಿಲ್ಲ. ರಾಷ್ಟ್ರ ಭದ್ರತೆಗೆ ಅನಿವಾರ್ಯವಾಗಿದ್ದು, ಜನತಾಚೀನ ತನ್ನ ಪರಮಾಧಿಕಾರಕ್ಕೆ ಒಳಪಟ್ಟ ಪ್ರದೇಶದಲ್ಲಿ ಕೈಗೊಳ್ಳುವ ಯಾವುದೇ ಕ್ರಮ ಆ ದೇಶದ ಆಂತರಿಕ ವ್ಯವಹಾರವಾಗಿದೆ. ಅದರಲ್ಲಿ ಅಮೇರಿಕೆಯು ಕೈಯಿಕ್ಕುವುದಾಗಲಿ, ಅದನ್ನು ನೆಪವಾಗಿ ಇಟ್ಟುಕೊಂಡು ದಕ್ಷಿಣ ಕೊರಿಯ ಉತ್ತರ ಕೊರಿಯದ ಮೇಲೆ ಧಾಳಿ ನಡೆಸುವುದಾಗಲಿ ನಗ್ನ ಆಕ್ರಮಣವೆಂದು ಭಾರತ ಜನತೆಯೂ ಪರಿಗಣಿಸಬೇಕಾಗುವುದು. ಜನತಾಚೀನಕ್ಕೆ ಭಾರತ ಜನತೆಯ ಮತ್ತು ಸರಕಾರದ ಸಂಪೂರ್ಣ ಸಹಾನುಭೂತಿಯಿದೆ, ಬೆಂಬಲವಿದೆ.

ನಿರ್ಜೀವ ಚಿಯಾಂಗನನ್ನು ರಕ್ಷಿಸುವ ಹಾಗೂ ಆ ಕಾರಣದಲ್ಲಿ ಭದ್ರವಾದ ಸೇನಾವ್ಯೂಹವನ್ನು ರಚಿಸಿಕೊಂಡು ಕೂಡ್ರುತ್ತಿರುವ ಅಮೇರಿಕೆಯ ನೀತಿ ನಮಗೆ, ಏಷ್ಯಾದವರಿಗೆ ಮಾರಕವಾಗಿದೆ. ಯುದ್ಧ ಆಸ್ಫೋಟಿಸಲ್ಪಟ್ಟರೆ ಬಳಲುವರು ಏಷ್ಯನ್ನರು, ಅಮೇರಿಕೆಯವರಲ್ಲ. ಅಂತೆಯೇ ಅಮೇರಿಕಾ ಏಷ್ಯಾದಿಂದ ತನ್ನ ಆಕ್ರಮಣಕಾರಿ ಹೆಜ್ಜೆಗಳನ್ನು ಕಿತ್ತು ಹಿಂದಕ್ಕಿಡಬೇಕೆಂದು ಏಷ್ಯನ್ ಜನತೆ ಒಕ್ಕೊರಲಿನ ಎಚ್ಚರಿಕೆ ನೀಡುವ ಕಾಲವಿದು.

ರಾಜ್ಯದ ರಾಜಕೀಯ ರಂಗ

ಮೈಸೂರು ಕಾಂಗ್ರೆಸ್ಸಿನ ಒಳಗುಂಪು ಹೊಯ್ದಾಟದ ತಕ್ಕಡಿ—ಬೆಕ್ಕುಗಳು ಕದ್ದ ಬೆಣ್ಣೆಯನ್ನು ಪಾಲು ಮಾಡಿದ ಮಂಗನ ಕೈಯ್ಯೊಳಗಿನ ತಕ್ಕಡಿಯಂತೆ—ಆ ಕಡೆಗೊಮ್ಮೆ ಈ ಕಡೆಗೊಮ್ಮೆ ತೂಗಾಡುತ್ತಲೇ ಇದೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯಲ್ಲಿ ಮಂತ್ರಿಮಂಡಲದ ವಿರೋಧಿಗಳ ಗುಂಪಿಗೆ ಜಯವಾಯಿತು. ಪ್ರತಿಯೊಬ್ಬ ಕಾಂಗ್ರೆಸ್ ಎಮ್ಮೆಲ್ಲೆಯೂ ಮಂತ್ರಿ ಪದವಿಯ ಕನಸು ಕಾಣುತ್ತಿರುವ ಕಾಲವಿದು. ಆದರ ಪ್ರತ್ಯಾಘಾತ ಮಂತ್ರಿಮಂಡಲದೊಳಗೂ ಒಡಕು ಹೆಚ್ಚಿಸಿದೆ.

'ಸ್ಥಳದಲ್ಲೇ ನಿಕಾಲೆ !'

ಸರಕಾರಕ್ಕೂ ಜನತೆಗೂ 'ನಿಕಟ ಸಂಬಂಧ ಏರ್ಪಡಿಸಲು' ಉಪಮಂತ್ರಿಗಳಿಗೆ ಮೂರು ಮೂರು ಜಿಲ್ಲೆಗಳನ್ನು ಹಂಚಲಾಗಿದೆ. 'ಸ್ಥಳದಲ್ಲೇ ಅರ್ಜಿ ನಿಖಾಲೆ' ಮಾಡುವ ಸಮಾರಂಭವನ್ನು ಕಡಿದಾಳ ಮಂಜಪ್ಪನವರು ಸಂಭ್ರಮದಿಂದ ಉದ್ಘಾಟಿಸಿದರು. ಅನಂತರ? ಅರ್ಜಿಗಳು ಫೈಲುಗಳೊಳಗೆ ನಿದ್ರಿಸುವ ಅಥವ ಕಸದ ಬುಟ್ಟಿಯನ್ನು ಸೇರುವವು. ಇದೇ ಸ್ಥಳದಲ್ಲೇ ನಿಕಾಲೆ !

ಗಾಂಧೀಜಿಯವರ ಜನ್ಮದಿನವಾದ ಅಕ್ಟೋಬರ್ ತಾ. 2ರಂದು ಜೋಡಿಗ್ರಾಮಗಳನ್ನೆಲ್ಲ ಸರಕಾರ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಎಂದು ಕಂದಾಯ ಮಂತ್ರಿಗಳು ಘೋಷಿಸಿದರು. ಆದರೆ ಹಾಗೆ ಮಾಡಲು ಸರಕಾರಕ್ಕೆ ಅಧಿಕಾರ ಕೊಡುವ ಕಾಯಿದೆ ಆಗಬೇಕಷ್ಟೆ? ಎಸೆಂಬ್ಲಿಯ ಸಭೆ ಅಕ್ಟೋಬರ ಕೊನೆಯ ವಾರದಲ್ಲಷ್ಟೇ ಸೇರುವುದೆಂದು ಈಗ ಪ್ರಕಟಿಸಲಾಗಿದೆ. ಹಾಗಾದರೆ ಜೋಡಿ-ಇನಾಂ ರದ್ದಿಯಾತಿಯ ಪ್ರಶ್ನೆ ಸದ್ಯ ಇಲ್ಲವೆಂದಾಯಿತು.

ಜತ್ತಿ ಸಮಿತಿಯ ವರದಿಯನ್ನು ಎಂ. ಪಿ.ಸಿ.ಸಿ. ಪರಿಶೀಲಿಸುತ್ತಿದೆ. ಆದರ ತೀರ್ಪು ಯಾವಾಗ ಬರುವುದು? ಬರುವ ತೀರ್ಪು ಹೇಗಿರುವುದು? ಅದೊಂದೂ ಗೊತ್ತಿಲ್ಲ. ಭೂಸುಧಾರಣೆಯ ಬಗ್ಗೆ ಜತ್ತಿ ಸಮಿತಿ ಕೊಟ್ಟಿರುವ ವರದಿಯಲ್ಲಿ ಅವಶ್ಯ ಅಗತಕ್ಕ ಪುರೋಗಾಮೀ ಬದಲಾವಣೆಯನ್ನು ಎಂ ಪಿ.ಸಿ.ಸಿ ಖಂಡಿತ ಮಾಡುವಂತಿಲ್ಲ. ವರದಿಯನ್ನು ಇದ್ದಕ್ಕಿದ್ದಂತೆ ಉಳಿಸುವಂತೆಯೂ ಇಲ್ಲ. ಅದನ್ನು ಆದಷ್ಟು ಹೆಚ್ಚು ಪ್ರತಿಗಾಮಿಯಾಗಿ ಪರಿವರ್ತಿಸುವ ಪ್ರಯತ್ನವೀಗ ನಡೆದಿದೆ.

ರಾಜ್ಯದ ಎಲ್ಲ ಕಡೆಗಳಲ್ಲೂ ಆಹಾರ ಧಾನ್ಯಗಳ ಬೆಲೆ ವಿಪರೀತವಾಗಿ ಏರಿದೆ. ಕೆಲವು ಜಿಲ್ಲೆಗಳಲ್ಲಿ ಬರಗಾಲಕ್ಕೆ ಹತ್ತಿರದ ಪರಿಸ್ಥಿತಿಯಿದೆ ಆದರೆ ರಾಜ್ಯದ ಆಹಾರ ಸಚಿವರ ಅಭಿಪ್ರಾಯದಲ್ಲಿ, "ಆಹಾರದ ಸಮಸ್ಯೆಯೇ ಇಲ್ಲ; ಇದೆಯೆಂದು ಹೇಳುವುದರಿಂದಲೇ ಅದು ಹುಟ್ಟುಕೊಳ್ಳಬಹುದು"! ಅಂದರೆ, ಆಹಾರ ಧಾನ್ಯಗಳ ಬೆಲೆ ಏರದಂತೆ ತಡೆಯಬೇಕು, ಬರಗಾಲದ ಸ್ಥಿತಿಯಿರುವಲ್ಲಿ ಪರಿಹಾರ ಕ್ರಮ ವಹಿಸಬೇಕು ಎಂದು ಯಾರಾದರೂ ಕೂಗೆಬ್ಬಿಸಿದರೆ ಮಂತ್ರಿಗಳಿಗೊಂದು ತಲೆ ಸಿಡಿತದ ಸಮಸ್ಯೆ ಹುಟ್ಟುವುದು. ಇಲ್ಲವೆಂದರೆ ಕಣ್ಣು ಮುಚ್ಚಿ, ಕೈ ಕಟ್ಟು ಕುಳಿತಿರಬಹುದಲ್ಲ?

ಬೇಡಿಕೆಗಳಿಗುತ್ತರ-ಹರಟೆ !

ಕಾರ್ಮಿಕ ವಿಭಾಗದ ವಯೋವೃದ್ಧ ಸಚಿವರು ಜ್ಞಾನವೃದ್ಧರಂತೆ ಮಾತಾಡುವುದನ್ನು ಕೇಳುವಾಗ "ಅರುವತ್ತರಲ್ಲಿ ಅರಳು ಮರಳು" ಎಂಬ ಗಾದೆ ನೆನಪಿಗೆ ಬರುತ್ತದೆ. ಹೋದ ಹೋದಲ್ಲೆಲ್ಲ "ಕಮ್ಯೂನಿಸಂ ಭಾರತದ ಸಂಸ್ಕೃತಿಗೆ ಒಗ್ಗುವುದಲ್ಲ" ಎಂದು ಹಾಡುವುದೊಂದೇ ಅವರ ಕಸಬು! ಈ ಮಹಾಶಯರ ಮಾತುಗಳಿಂದಲೂ ಕೃತಿಯಿಂದಲೂ ಒಂದು ವಿಷಯ ಸ್ಪಷ್ಟವಾಗುತ್ತದೆ: ಅವರಿಗೆ ಭಾರತದ ಸಂಸ್ಕೃತಿಯ ಬಗ್ಗೆಯಾಗಲಿ ಕಮ್ಯೂನಿಸಮಿನ ಬಗ್ಗೆಯಾಗಲಿ ಸರಿಯಾದ ಕಲ್ಪನೆ ಇಲ್ಲ. ಕಾರ್ಮಿಕ ಸಚಿವರೆನಿಸಿಕೊಂಡ ಮೇಲೆ ಕಾರ್ಮಿಕ ಸಂಘಗಳ ಮನವಿಗಳನ್ನು ಓದಿ ನೋಡುವ ವ್ಯವಧಾನವಾದರೂ ಬೇಡವೆ? ಭೇಟಿಗೆ ಬಂದ ಕಾರ್ಮಿಕ ಪ್ರತಿನಿಧಿಗಳೆದುರು ಕಮ್ಯೂನಿಸಂ, ಭಾರತ ಸಂಸ್ಕೃತಿಗಳನ್ನು ಕುರಿತು ಹರಟಿದರೇನಾದೀತು? ವರ್ಷಗಟ್ಟಲೆ ಸರಕಾರದ ತೀರ್ಮಾನವನ್ನು ಕಾದಿರುವ ಬೀಡಿ ಕೆಲಸಗಾರರ ಕನಿಷ್ಟ ವೇತನ, ಗೋಡಂಬಿ ಕಾರ್ಖಾನೆಗಳನ್ನು ಮುಚ್ಚಿದಾಗ ಕಾರ್ಮಿಕರಿಗೆ ಪರಿಹಾರ ಕೊಡುವ ಪ್ರಶ್ನೆ, ಶಾಪ್ ಎಂಡ್ ಎಸ್ಟಾಬ್ಲಿಷ್‌ಮೆಂಟ್ಸ್ ಆಕ್ಟ್ ಮತ್ತು ಪ್ರಸವ ವೇತನಾ ಶಾಸನಗಳಲ್ಲಿ ಯೋಗ್ಯ ತಿದ್ದುಪಡಿಗಳನ್ನು ಮಾಡುವ ವಿಚಾರ—ಯಾವುದೂ ಈ ಸಚಿವೋತ್ತಮರ ಗಮನದಲ್ಲಿ ಇಲ್ಲ.

ಕೆಲವು ಮಂತ್ರಿಗಳ ಸ್ವಜನ ಪಕ್ಷಪಾತತನದ—ಸಂಬಂಧಿಕರಿಗೆ ಕಾಲೇಜುಗಳಲ್ಲಿ ಸೀಟು ತೆಗೆಸಿಕೊಡುವುದು, ಉದ್ಯೋಗ ದೊರಕಿಸಿಕೊಡುವುದು ಇತ್ಯಾದಿ-ಆರೋಪಗಳು ಪತ್ರಿಕೆಗಳಲ್ಲಿ ಆಗಲೇ ವರದಿಯಾಗಿವೆ. ಇದು ಮೈಸೂರು ರಾಜಕೀಯದ ಒಂದು ವಿಶಿಷ್ಟತೆಯಾಗಿ ಬಿಟ್ಟಿದೆ.

ಇನ್ನೊಂದು ಮುಸ್ಲಿಂ ಲೀಗ್ ಏತಕ್ಕೆ ?

ಜಾತೀಯತೆ ಮೈಸೂರು ರಾಜಕೀಯದ ಇನ್ನೊಂದು ವಿಶೇಷ ಸ್ವಭಾವ. ಕಾಂಗ್ರೆಸ್ಸ ಎಸೆಂಬ್ಲಿ ಸದಸ್ಯತ್ವವನ್ನೂ ಮಂತ್ರಿಪದವಿಗಳನ್ನೂ ಜಾತಿ-ಮತಗಳ ಆಧಾರದಲ್ಲೇ ವಿಂಗಡಿಸಿಕೊಡುತ್ತದೆ. ಈ ಹಿನ್ನೆಲೆಯಲ್ಲಿ, ಮೈಸೂರಲ್ಲಿ ಮುಸ್ಲಿಂ ಲೀಗನ್ನು ಸಂಘಟಿಸಲು ಕೇರಳದ ಮುಸ್ಲಿಂ ಲೀಗ್‌ನ ನಾಯಕರಿಂದ ತೀವ್ರ ಪ್ರಯತ್ನ ನಡೆಯುತ್ತಿದೆ ಎಂದು ಗೊತ್ತಾಗಿದೆ. ಕೇರಳದ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ಉಪನಾಯಕ ಉಮ್ಮರ್ ಕೋಯ (ಅಲ್ಲಿ ಮುಸ್ಲಿಂ ಲೀಗಿನೊಡನೆ ಕಾಂಗ್ರೆಸ್ಸು ಕೈ-ಕೂಡಿಸಿಕೊಂಡಿದೆ) ಮತ್ತು ನಮ್ಮ ಉಪಸಚಿವ ಷಂಸುದ್ದೀನ್‌ರವರು ಮೈಸೂರಿನ ಮುಸ್ಲಿಮರಿಗೆ ಕರೆಯಿತ್ತಿದ್ದಾರೆ: ನೀವೇನೂ ಬೇರೆ ಪಕ್ಷ ಕಟ್ಟಬೇಡಿರಿ; ಕಾಂಗ್ರೆಸಿಗೆ ಸೇರಿರಿ! ಮುಸ್ಲಿಂಲೀಗಿನ ಪಾತ್ರವನ್ನಿಲ್ಲಿ ಕಾಂಗ್ರೆಸ್ಸೇ ನಿರ್ವಹಿಸುವಾಗ ಬೇರೆ ಪಕ್ಷವಾದರೂ ಯಾಕೆ?

ವಾರದ ಅಂತರ್‌ರಾಷ್ಟ್ರೀಯ ಸಮೀಕ್ಷೆ

ದೂರದ ಪೂರ್ವ ಪ್ರದೇಶದಲ್ಲಿ

ಕ್ವಿಮೋಯ್ ದ್ವೀಪದ ಕಡೆಗೆ ಜಗತ್ತಿನ ದೃಷ್ಟಿ ಹರಿದಿದೆ. ಅದು ಚೀನದ ಆಂತರಿಕ ವಿಷಯ. ಆದರೆ ಅಮೇರಿಕೆಯ ಯುದ್ಧ ಹಡಗುಗಳು ಎಲ್ಲೆಲ್ಲಿಂದಲೂ ಆ ಕಡೆಗೆ ಧಾವಿಸತೊಡಗಿವೆ. ಫೋರ್ಮೋಸಾವನ್ನು "ರಕ್ಷಿಸುವ ಜವಾಬ್ದಾರಿ"ಯನ್ನು ತಾನು ಕೈಬಿಡಲು ಸಾಧ್ಯವಿಲ್ಲವೆಂಬ ಅಮೇರಿಕೆಯ ಅಧ್ಯಕ್ಷರ ಮಾತು, ಫೋರ್ಮೋಸಾದ ಮೇಲೇನಾದರೂ ಧಾಳಿ ನಡೆದರೆ ತಾವು ಉತ್ತರ ಕೊರಿಯದ ಮೇಲೆ ಪ್ರತಿ ಧಾಳಿ ನಡೆಸುವುದಾಗಿ ದಕ್ಷಿಣ ಕೊರಿಯದ ಸೈನ್ಯಾಧಿಪತಿಯ ಬೆದರಿಕೆ, ಇವೆಲ್ಲ ಪರಿಸ್ಥಿತಿಯನ್ನು ಗಂಭೀರಗೊಳಿಸಿವೆ.

ಆದರೆ ಅಮೇರಿಕೆಯ ಏಳನೇ ನೌಕಾದಳದೊಂದಿಗೆ ನೇರವಾದ ಘರ್ಷಣೆಯಿಲ್ಲದೇನೇ, ಕರಾವಳಿಯ ಸಮೀಪದ ಕ್ವಿಮೋಯ್ ಮತ್ತಿತರ ದ್ವೀಪಗಳನ್ನು ಚೀನ ವಶಪಡಿಸಿಕೊಳ್ಳುವುದೆಂದು ನಿರೀಕ್ಷಕರು ಅಭಿಪ್ರಾಯಪಡುತ್ತಾರೆ.

ಈ ದ್ವೀಪಗಳ ಮೇಲೂ ಫೋರ್ಮೋಸಾದ ಮೇಲೂ ಚೀನದ ಪರಮಾಧಿಕಾರದ ಬಗ್ಗೆ ವಿವಾದವಿಲ್ಲ. ಚಿಯಾಂಗ್‌ನ ರಾಷ್ಟ್ರ ಘಾತುಕ ಕೊಮಿಂಟಾಂಗ್ ಅಮೇರಿಕದ ನೌಕಾದಳ, ಭೂಸೈನ್ಯ, ವಿಮಾನ ಸೇನೆ, ಅಣು ಆಯುಧಗಳು ಹಾಗೂ ಡಾಲರ್‌ನ ಬಲದಿಂದ ಫೋರ್ಮೋಸಾದಲ್ಲಿ ತಲೆಮರೆಸಿಕೊಂಡಿದ್ದು ಚೀನದ ಭದ್ರತೆಗೆ ವಿಪತ್ತನ್ನುಂಟುಮಾಡುತ್ತಿದೆ. ಅದನ್ನು ನಿರ್ಮೂಲನಗೊಳಿಸಲು ಚೀನ ಕೈಗೊಳ್ಳುವ ಕ್ರಮಗಳು ನ್ಯಾಯಬದ್ಧವಾದರೂ ಭಾರತದ ರಾಜಧಾನಿಯಲ್ಲಿ ಅದಕ್ಕೆ ಬೆಂಬಲವಿನ್ನೂ ಪ್ರಕಟವಾಗಿಲ್ಲ. ಅಮೇರಿಕ ಮತ್ತದರ ಎಂಜಲುದಾಸರ ಪ್ರಚೋದನೆಗಳನ್ನು, ಬಲಾತ್ಕಾರವನ್ನು, ವಿರೋಧಿಸುವ ಪ್ರಸ್ತಾವನೆಯಿನ್ನೂ ಹೊರಟಿಲ್ಲ.

ಭಾರತ—ಪಾಕಿಸ್ತಾನ ಮಾತುಕತೆಗಳು

ಪಾರ್ಲಿಮೆಂಟಿನಲ್ಲಿ ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಮತ್ತು ಭಾರತದ ವಿದೇಶಾಂಗ ನೀತಿಯ ಬಗ್ಗೆ ಚರ್ಚೆ ನಡೆದಾಗ ಭಾರತ—ಪಾಕಿಸ್ಥಾನ ಸಂಬಂಧದ ಕುರಿತು ಒಂದು ಮುಖ್ಯ ಅಂಶ ಪ್ರಸ್ತಾಪಿಸಲ್ಪಟ್ಟಿತು. ಪಾಕಿಸ್ಥಾನದಲ್ಲಿ ಭಾರತಕ್ಕೆ ವಿರೋಧವಾದ ಅಪಪ್ರಚಾರ ನಡೆಯುತ್ತಿರುವುದಕ್ಕೂ ಪಾಕಿಸ್ಥಾನವು ಭಾರತದ ಗಡಿಯನ್ನು ಉಲ್ಲಂಘನೆ ಮಾಡುತ್ತಿರುವುದಕ್ಕೂ ಮುಖ್ಯ ಕಾರಣ ಆ ದೇಶಕ್ಕೆ "ಕೆಲವು ಪ್ರಬಲ ಶಕ್ತಿಗಳಿಂದ" ದೊರಕುತ್ತಿರುವ ಪ್ರಚೋದನೆ, ಪ್ರೋತ್ಸಾಹ ಮತ್ತು ಆಯುಧ ಪೂರೈಕೆಯ ಬೆಂಬಲ ಎಂದು ಪ್ರಧಾನಿ ನೆಹರೂರವರು ತಿಳಿಸಿದರು. ಅಲ್ಲವಾದರೆ ಈ ಎರಡು ದೇಶಗಳು ಸೌಹಾರ್ದತೆಯಿಂದ ಬಾಳಲು ಸಾಧ್ಯವಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯ ಸಭೆಯಲ್ಲಿ ಭೂಪೇಶ ಗುಪ್ತರವರು ಮಾತನಾಡುತ್ತ, ಪಾಕಿಸ್ತಾನ ನಮ್ಮ ಸರಹದ್ದುಗಳಲ್ಲಿ ಘರ್ಷಣೆ ನಡೆಸುತ್ತಿರುವುದು ಶೀತಯುದ್ಧವನ್ನು ಏಷ್ಯಕ್ಕೆ ಹರಡುವ ಅಮೇರಿಕದ ತಂತ್ರದ ಭಾಗವಾಗಿದೆಯೆಂದು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಭಾರತ—ಪಾಕಿಸ್ಥಾನ ಕಾರ್ಯದರ್ಶಿಗಳ ಮಟ್ಟದ ಮಾತುಕತೆ ಕರಾಚಿಯಲ್ಲಿ ನಡೆಯುತ್ತಿರುವುದರ ಕಡೆಗೆ ಎಲ್ಲರ ಗಮನ ಹರಿದಿದೆ. ಕೈದಿಗಳ ಹಸ್ತಾಂತರದ ತತ್ವದ ಬಗ್ಗೆ ಒಪ್ಪಂದಕ್ಕೆ ತಲುಪಲಾಗಿದೆ ಎಂಬ ವಾರ್ತೆ ಬಂದಾಗ, ಆ ಮಾತುಕತೆಗಳು ಫಲಪ್ರದವಾಗಬಹುದೆಂಬ ನಿರೀಕ್ಷೆ ತಲೆದೋರಿತು. ಆದರೆ ಸೆಕ್ರಟರಿ ಮಟ್ಟದ ಮಾತುಕತೆ ವಿಫಲವಾಗಿದೆಯೆಂದು ಪಾಕಿಸ್ಥಾನದ ಪ್ರಧಾನ ಮಂತ್ರಿ ಹೇಳಿಕೆಯಿತ್ತಿದ್ದಾರೆ. ಗಡಿ ವಿವಾದಗಳ ಬಗ್ಗೆ ಯಾವುದೊಂದು ತೀರ್ಮಾನಕ್ಕೂ ಬರಲಾಗಲಿಲ್ಲವೆಂದೂ, ಆದರಿಂದ ಸೆಪ್ಟಂಬರ ತಾ. 10ಕ್ಕೆ ಡಿಲ್ಲಿಯಲ್ಲಿ ನಡೆಯಲಿರುವ ಪ್ರಧಾನಿಗಳ ಸಮ್ಮೇಳನದಲ್ಲಿ ಏನು ಮಾತಾಡಬೇಕೆಂಬುದೇ ತಿಳಿಯದಾಗಿದೆಯೆಂದೂ ಫೆರೋಜ್ ಖಾನ್‌ನೂನ್ ಹೇಳಿರುವುದಾಗಿ ವರದಿಯಾಗಿದೆ.

ಪಾರ್ಲಿಮೆಂಟಿನ ಚರ್ಚೆಯ ಕಾಲದಲ್ಲಿ ಪೀಯಸ್ಪಿ ನಾಯಕ ಕೃಪಲಾನಿಯೊಬ್ಬರು "ಪಂಚಶೀಲವು ಪಾಪಕೂಪದಲ್ಲಿ ಹುಟ್ಟಿತು" ಎಂದು ಉದ್ಗರಿಸಿದ್ದರೆ, ಡಿಲ್ಲಿಯ ಸಪ್ರೂ ಭವನದಲ್ಲೊಂದು ಸಭೆಯ ಅಧ್ಯಕ್ಷಸ್ಥಾನದಿಂದ ಅಶೋಕ ಮೆಹತಾರವರು, "ಭಾರತ—ಪಾಕಿಸ್ಥಾನ ವೈಷಮ್ಯತೆಗೆ ಪಾಕಿಸ್ಥಾನದಷ್ಟೇ ಭಾರತವೂ ಜವಾಬ್ದಾರವಾಗಿದೆ" ಎಂದು ಹೇಳಿದ್ದಾರೆ. ಅದನ್ನು ಸಕಾರಣವಾಗಿ ವಿವರಿಸುವ ಗೊಡವೆಗೆ ಅವರು ಹೋಗಲಿಲ್ಲ! ಪಾಕಿಸ್ಥಾನದ ದ್ವೇಷಪೂರಿತ ನೀತಿ ಮತ್ತು ಅದರ ಹಿಂದೆ ಅವಿತಿರುವ ಅಮೇರಿಕದ ಹಾಗೂ ಬ್ರಿಟನ್ ಸಮೇತವಾದ ಬಾಗ್ದಾದ್ ಯುದ್ಧಕೂಟದ ಪ್ರಚೋದನೆಯನ್ನು ಮರೆಮಾಚುವುದೇ ಈ ಪೀಯಸ್ಪಿ ನಾಯಕರ ಉದ್ದೇಶವೆಂದು ಯಾರಿಗೂ ಅರ್ಥವಾಗದಿರದು.

ಆಹಾರ ಸಮಸ್ಯೆಯು ಜಟಿಲವಾಗಿದೆ

ಕಳೆದ ಕೆಲವು ದಿನಗಳಿಂದ ಆಹಾರದ ಸಮಸ್ಯೆಯು ಮುಖ್ಯ ಚರ್ಚೆಯ ವಿಷಯವಾಗಿದೆ. ಈ ಸಮಸ್ಯೆಯನ್ನು ಅಲಕ್ಷಿಸುತ್ತಿದ್ದ ಅಧಿಕಾರಿ ವೃತ್ತಗಳನ್ನು ಹೊಡೆದೆಬ್ಬಿಸಿರುವುದು ಉತ್ತರ ಪ್ರದೇಶದ ದಾರುಣ ಪರಿಸ್ಥಿತಿ. ಅಲ್ಲಿ ಅನ್ನದ ಪ್ರಶ್ನೆಯೊಂದು ರಾಜಕೀಯ ಪ್ರಶ್ನೆಯಾಗಿ ಪರಿಣಮಿಸಿದೆ. ಜನರ ಅತೃಪ್ತಿಯು ಧಾನ್ಯದಂಗಡಿಗಳನ್ನು ಸೂರೆ ಮಾಡುವ ಮಟ್ಟಕ್ಕೆ ತಲುಪಿದೆ. ಪ್ರತಿಪಕ್ಷಗಳ ನೇತೃತ್ವದಲ್ಲಿ ಆಹಾರದ ಚಳುವಳಿ ಬಿರುಸಾಗಿದೆ.

ಪರಿಸ್ಥಿತಿಯು ಇಷ್ಟೊಂದು ತೀವ್ರವಾಗಿರುವಾಗ ಪ್ರಧಾನಿ ನೆಹರೂರವರು ಕಾಂಗ್ರೆಸ್ ಪಕ್ಷದ ಪಾರ್ಲಿಮೆಂಟ್ ಸದಸ್ಯರ ಸಭೆಯಲ್ಲಿ ಆಹಾರ ಸಮಸ್ಯೆಯ ಕುರಿತು ಮಾಡಿರುವ ಭಾಷಣದಿಂದ ಯಾರಿಗೂ ಸಮಾಧಾನವಾಗುವಂತಿಲ್ಲ. ನೆಹ್ರೂರವರು ಸ್ಪಷ್ಟ ಪರಿಹಾರ ಮಾರ್ಗಗಳನ್ನು ಸೂಚಿಸುವ ಬದಲು ಸಾಮಾನ್ಯ ಉಪದೇಶವನ್ನೀಯುವ ಧಾಟಿಯಲ್ಲೇ ಮಾತಾಡಿದ್ದಾರೆ. ಸರಕಾರವು ನಿಯಂತ್ರಣಗಳನ್ನು ಜ್ಯಾರಿಗೆ ತರುವುದಿಲ್ಲವೆಂಬ ಒಂದು ವಿಷಯವನ್ನು ಮಾತ್ರ ಅವರು ಸ್ಪಷ್ಟಪಡಿಸಿದರು.

ಸಮಾಜ ವಿಕಾಸ ಕಾರ್ಯಕ್ರಮಗಳಲ್ಲಿ ಹೇರಳವಾಗಿ ದುರ್ವ್ಯಯವಾಗುತ್ತಿರುವುದನ್ನು ಪ್ರಾಂತಸರಕಾರಗಳು ಆಹಾರ ಸಮಸ್ಯೆಯ ನಿವಾರಣೆಗೆ ಕ್ರಮವಹಿಸದಿರುವುದನ್ನು ವಿಮರ್ಶಿಸಲಾಗಿದೆ ಆದರೆ ಆ ದೋಷಗಳನ್ನು ತಿದ್ದಲು ಕೇಂದ್ರ ಸರಕಾರ ಏನು ಮಾಡಿದೆ? ಮುಂದಕ್ಕಾದರೂ ಏನು ಮಾಡುವುದು? ಈ ಪ್ರಶ್ನೆಗಳಿಗೆ ಉತ್ತರ ದೊರೆತಿಲ್ಲ ಒಂದು ತೀವ್ರ ರಾಷ್ಟ್ರೀಯ ಮುಗ್ಗಟ್ಟಾಗಿರುವ ಈ ಆಹಾರದ ಸಮಸ್ಯೆಯನ್ನು ಪರಿಹರಿಸುವ ವಿಚಾರದಲ್ಲಿ ಇನ್ನೂ ಪರಿಣಾಮಕಾರಿಯಾದ ಕ್ರಮವೇನನ್ನೂ ಇಡುವ ಯೋಚನೆ ಕೇಂದ್ರ ಸರಕಾರಕ್ಕೆ ಇರುವಂತೆ ತೋರುವುದಿಲ್ಲ.

ಕಾಂಗ್ರೆಸ್—ಪೀಯಸ್ಪಿ ಗೂಢಾಲೋಚನೆ

ಕೇರಳದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ ಹೋರಾಟ ನಡೆಸಲು ಕರೆಕೊಡುವ ಪೀಯಸ್ಪಿಯ ರಾಷ್ಟ್ರೀಯ ಕೌನ್ಸಿಲಿನ ನಿರ್ಣಯದಲ್ಲಿ, ಅಧ್ಯಕ್ಷರ ಆಳ್ವಿಕೆಯನ್ನು ಅಪೇಕ್ಷಿಸುವುದಿಲ್ಲವೆಂಬ ಅಂಶವನ್ನು ಸೇರಿಸುವುದಕ್ಕೆ ಕೇರಳದ ಇಬ್ಬರು ಸದಸ್ಯರ ವಿರೋಧವಿತ್ತೆಂದು ತಿಳಿದು ಬಂದಿದೆ. ಅಧ್ಯಕ್ಷರ ಆಳ್ವಿಕೆಯನ್ನು ಅಪೇಕ್ಷಿಸುವುದಿಲ್ಲವೆಂದು ಹೇಳಿದರೆ ಕೇರಳದಲ್ಲಿ ಕಾಂಗ್ರೆಸ್ಸಿನ ಜೊತೆಯಲ್ಲಿ ಐಕ್ಯರಂಗ ಏರ್ಪಡಿಸಲು ಕಷ್ಟವಾಗುವುದೆಂದು ಅವರು ವಾದಿಸಿದರು. ಲೋಕಸಭೆಯಲ್ಲಿ ಕೇರಳದ ಬಗ್ಗೆ ತನ್ನ ನಿಲುವಳಿ ಸೂಚನೆಯನ್ನು ವಿವರಿಸುತ್ತ, ಡಾ॥ ಕೆ. ಬಿ. ಮೆನೊನ್ ಅಧ್ಯಕ್ಷರ ಆಳ್ವಿಕೆಯನ್ನು ಕೇರಳಕ್ಕೆ ಆಮಂತ್ರಿಸಿದ್ದರು.

ಸರ್ವ ಶ್ರೀಗಳಾದ ಢೇಬರ್, ಎಸ್. ಕೆ. ಪಾಟೀಲ್, ಅಶೋಕ ಮೆಹ್ತ, ದಾಮೋದರ ಮೇನೋನ್, ಡಾ॥ ಕೆ. ಬ. ಮೇನೊನ್ ಮತ್ತು ಮಾಧವನ್ ನಾಯರ್ ಇವರುಗಳು ಹೊಸದೆಹಲಿಯಲ್ಲಿ ಮಾಧವನ್ ನಾಯರ್‌ರ ನಿವಾಸದಲ್ಲಿ ಗುಪ್ತ ಸಭೆಯೊಂದನ್ನು ನಡೆಸಿದ್ದಾರೆಂದೂ, ಅದರಲ್ಲಿ ಕೇರಳದ ಕಾಂಗ್ರೆಸ್—ಪೀಯಸ್ಪಿ ಸಂಯುಕ್ತ ಕಾರ್ಯಾಚರಣೆಗೊಂದು ಕಾರ್ಯಕ್ರಮ ಆಲೋಚಿಸಲಾಗಿದೆಯೆಂದೂ ವಿಶ್ವಸನೀಯವಾಗಿ ತಿಳಿದು ಬಂದಿದೆ.

ಮೊರಾರ್ಜಿಯವರ ಭಿಕ್ಷಾಟನೆ

ಭಿಕ್ಷಾಟನೆಗೆ ಪಶ್ಚಿಮಾಭಿಮುಖವಾಗಿ ವಿದೇಶ ಯಾತ್ರೆಗೆ ಹೊರಟಿರುವ ಮೊರಾರ್ಜಿ ದೇಸಾಯಿಯವರ ಒಂದೊಂದು ಮಾ

(೬ನೇ ಪುಟ ನೋಡಿ)

ಸ್ಥಳದರಲ್ಲಿ ಸುದ್ದಿ

ಡಕಾಯಿತರ ಬಳಿ ಅಮೇರಿಕೆಯ ಶಸ್ತ್ರಾಸ್ತ್ರಗಳು!

ಮಧ್ಯಪ್ರದೇಶದ ಡಕಾಯಿತರು ಅಮೇರಿಕೆಯ ಶಸ್ತ್ರಾಸ್ತ್ರಗಳನ್ನು ಹೊಂದಿರುವದಾಗಿ ವರದಿಯಾಗಿದೆ. ಮುಖ್ಯ ಮಂತ್ರಿ ಶ್ರೀ ಕೆ. ಎನ್. ಕಟ್ಜೂರವರು ವಿಧಾನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ "ಇತ್ತೀಚೆಗೆ ಬಂಧಿಸಲ್ಪಟ್ಟ ಡಕಾಯಿತರ ಬಳಿ 'ಮೇಡ್ ಇನ್ ಯು. ಎಸ್. ಎ.' ಶಸ್ತ್ರಗಳೂ ದೊರೆತಿವೆ. ಈ ಶಸ್ತ್ರಾಸ್ತ್ರಗಳು ಹೇಗೆ ಬಂದುವು ಎಂಬುದು ಗೂಢವಾಗಿದ್ದು ಇದೀಗ ಸಂಶೋಧನೆ ನಡೆದಿದೆ. ಭಾರತ ಸರ್ಕಾರಕ್ಕೂ ಈ ವಿಷಯವನ್ನು ತಿಳುಹಿಸಲಾಗಿದ್ದು ಈ ಶಸ್ತ್ರಾಸ್ತ್ರಗಳು ಪಾಕೀಸ್ಥಾನದ ಮೂಲಕ ಇಲ್ಲಿಗೆ ಬಂದುವೊ ಹೇಗೋ ನಾನು ಹೇಳಲಾರೆ. ಒಟ್ಟು ಇಡೀ ವಿಷಯವೇ ಈಗ ತನಿಖೆಯಲ್ಲಿದೆ" ಎಂದು ಹೇಳಿದ್ದಾರೆ.

ದೇವಸ್ಥಾನಗಳ ಆಡಳಿತೆ-ಹರಿಜನರ ಆಯ್ಕೆ

ಕೊಚ್ಚಿನ್ ದೇವಸ್ಥಾನ ಆಡಳಿತ ಬೋರ್ಡಿಗೆ ಕಮ್ಯೂನಿಸ್ಟ್ ಹರಿಜನ ಸದಸ್ಯರೊಬ್ಬರು ಅವಿರೋಧವಾಗಿ ಚುನಾಯಿಸಲ್ಪಟ್ಟಿದ್ದಾರೆ. ಕೇರಳ ಅಸೆಂಬ್ಲಿಯಿಂದ ಈ ಬೋರ್ಡಿಗೆ ಆಯಲ್ಪಡಬೇಕಾದ ಹಿಂದೂಗಳ ಒಂದು ಸ್ಥಳಕ್ಕೆ ಹರಿಜನ ಕೋವಿನ ಟಿ. ಕೆ. ಕುಮಾರನ್ ಅವರೊಬ್ಬರದೇ ಹೆಸರಿತ್ತು.

ಗುಜರಾತಿನಲ್ಲಿ ಸಾಮೂಹಿಕ ಸತ್ಯಾಗ್ರಹ

ಗುಜರಾತಿನಲ್ಲಿ ಇದೇ ತಿಂಗಳ 17ನೇ ತಾರೀಖಿಗೆ ಸ್ಮಾರಕ ಸತ್ಯಾಗ್ರಹ ನಡೆದು ಒಂದು ತಿಂಗಳಾಗುವದರಿಂದ ಆ ದಿನ ಇಡೀ ಗುಜರಾತ್‌ದಲ್ಲೇ ಸಾಮೂಹಿಕ ಸತ್ಯಾಗ್ರಹ ನಡೆಸಲು ಮಹಾಗುಜರಾತ್ ಜನತಾ ಪರಿಷತ್ತು ನಿರ್ಧರಿಸಿದೆ. ಅಹ್ಮದಾಬಾದ್‌ನಲ್ಲಿ ಈಗ ಸತ್ಯಾಗ್ರಹಕ್ಕೆ ನಿರ್ಬಂಧವಿದ್ದು ಆ ದಿನ ನಾನಾ ಜಿಲ್ಲೆಗಳಿಂದ ಸ್ವಯಂಸೇವಕರು ಇಲ್ಲಿಗೆ ಆಗಮಿಸಿ ನಿರ್ಬಂಧವನ್ನು ಮುರಿಯುವರು.

ಜಪಾನಿಗೆ ರಾಷ್ಟ್ರಾಧ್ಯಕ್ಷರು

ಭಾರತ—ರಾಷ್ಟ್ರಾಧ್ಯಕ್ಷರು ಜಪಾನ್ ಸರ್ಕಾರದ ಆಮಂತ್ರಣವನ್ನೂ ಸ್ವೀಕರಿಸಿ ಆ ಪ್ರಕಾರ ಸೆಪ್ಟಂಬರ್ 26ರಿಂದ ಅಕ್ಟೋಬರ್ 4ನೇ ತಾರೀಖಿನವರೆಗೂ ಜಪಾನಿನಲ್ಲಿ ಸಂಚರಿಸುತ್ತಾರೆ. ಅವರು ಅಲ್ಲಿ ಸರಕಾರದ ಅತಿಥಿಗಳಾಗಿ ಉಳಿಯುವರು.

ರಷ್ಯಾದಲ್ಲಿ ಪಾಲ್‌ರೋಬ್ಸನ್

ಅಮೆರಿಕದ ಖ್ಯಾತ ನಿಗ್ರೊ ಗಾಯಕ ಪಾಲ್‌ರೊಬ್ಸನ್‌ರು ರಷ್ಯಾದಲ್ಲಿ ಸಂಚರಿಸುತ್ತಿದ್ದು ಸೋವಿಯತ್ ಪ್ರಧಾನಿ ನಿಕಿಟಾ ಖ್ರುಶ್ಚೋವ್‌ರೊಡನೆ ಆತ್ಮೀಯ ಹಾಗೂ ಸ್ನೇಹದ ಮಾತುಕತೆಗಳನ್ನು ನಡೆಸಿದರು. ಅವರಿಬ್ಬರೂ ಒಟ್ಟಿಗೆ ಮಕ್ಕಳ ನಾಟ್ಯ—ಸಂಗೀತ ಪ್ರದರ್ಶನವನ್ನು ವೀಕ್ಷಿಸಿದರಲ್ಲದೆ ರೊಬ್ಸನ್‌ರು ಸೋವಿಯತ್ ಗೀತೆ 'ವೈಡ್ ಈಸ್ ಮೈ ನೇಟಿವ್ ಲೇಂಡ್'ನ್ನು ಹಾಡಿದರು.

ಕೇರಳ ಕಮ್ಯೂನಿಸ್ಟ್ ಸರ್ಕಾರದಲ್ಲಿ ಜನರಿಗೆ ಸಂಪೂರ್ಣ ನಂಬಿಕೆ

ಕೇಂದ್ರದ ದ್ವಿಮುಖನೀತಿ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ

"ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷವು ಸುಭದ್ರವಾಗಿದೆ. ಜನರ ವಿಷಯವಾಗಿ ಹೇಳುವುದಾದರೆ ಇಲ್ಲಿಯ ಜನತೆ ಕಮ್ಯೂನಿಸ್ಟ್ ಸರ್ಕಾರದಲ್ಲಿ ಸಂಪೂರ್ಣ ವಿಶ್ವಾಸವಿಟ್ಟಿದೆ. ಪರಿಸ್ಥಿತಿ ಹೀಗಿರುವಾಗ ಕಮ್ಯೂನಿಸ್ಟ್ ಪಾರ್ಟಿಯು ಲೇಜಿಸ್ಲೇಟಿವ್ ಶಕ್ತಿ ಅಥವಾ ಜನತೆಯಿಂದ ಪಡೆಯುವ ಶಕ್ತಿ ಇವೆರಡರ ದೃಷ್ಟಿಯಿಂದಲೂ ನಾಚಿಕೆಪಡಬೇಕಾದುದೇನೂ ಇಲ್ಲ, ಎರಡೂ ಕಡೆಗಳಿಂದಲೂ ಇರುವ ಬಲ ಅಲ್ಪವೇನಾಗಿಲ್ಲ.

"ಕಮ್ಯೂನಿಸ್ಟ್ ಮಂತ್ರಿಮಂಡಳದ ವಿರುದ್ಧ ಅವಿಶ್ವಾಸ ನಿರ್ಣಯ ತರುವದರ ಬಗ್ಗೆ ಕಾಂಗ್ರೆಸ್ಸಿಗರೊಬ್ಬರು ಮಾತನಾಡಿದ್ದಾರೆ. ಅವರೀ ಕ್ರಮವನ್ನು ನಾನು ಸ್ವಾಗತಿಸುತ್ತೇನೆ. ಯಾಕೆಂದರೆ ಇದು ಕಾಂಗ್ರೆಸ್ಸಿಗರು ರಾಜ್ಯಾಂಗ ಬದ್ಧವಾದ ಕ್ರಮಗಳನ್ನು ಕೈಕೊಳ್ಳುವ ಆರಂಭದ ಗುರುತೆಂದು ನನಗೆ ಸಂತೋಷ."

ಎಂಬುದಾಗಿ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಕಾಂ॥ ಅಜಯ್ ಘೋಷ್ ಅವರು ಮದರಾಸಿನಲ್ಲಿ ತಾ. ೨೮-೮-'೫೮ರಂದು ಪತ್ರಿಕಾ ಗೋಷ್ಠಿಯೊಂದರಲ್ಲಿ ಪ್ರಶ್ನೆಗಳ ಸುರಿಮಳೆಗೆ ಉತ್ತರ ಕೊಡುತ್ತ ತಿಳುಹಿಸಿದರು.

"ಕಮ್ಯೂನಿಸ್ಟ್ ಪಾರ್ಟಿಯು ಕೇರಳದಲ್ಲಿ ಬೆಳೆದಿದೆ, ಬಲಿಷ್ಠವಾಗಿದೆ, ಐಕ್ಯತೆಯಿಂದಿದೆ. ಕೇರಳದ ಸಚಿವ ಸಂಪುಟದ ನೀತಿಯ ಬಗ್ಗೆ ಪಾರ್ಟಿಯಲ್ಲಿ ಯಾವ ವ್ಯತಿರಿಕ್ತಾಭಿಪ್ರಾಯಗಳೂ ಇಲ್ಲ. ಬಿರ್ಲಾರವರೊಂದಿಗೆ (ರೇಯಾನ್ ತಿರುಳು ಕಾರ್ಖಾನೆಯ ಸ್ಥಾಪನೆ ವಿಚಾರ) ಮಾಡಿಕೊಂಡಿದ್ದ ವ್ಯವಹಾರದಲ್ಲಿಯ ಅಲ್ಪ ತಪ್ಪಿನ ಬಗ್ಗೆ ಪಾರ್ಟಿಯು ತಪ್ಪೆಂದು ಘೋಷಿಸಲು ಹಿಂಜರಿದಿಲ್ಲ. ಅದು 'ಸಣ್ಣ ತಪ್ಪೆಂದೂ' ಒಪ್ಪಿಕೊಳ್ಳಲ್ಪಟ್ಟಿದೆ. ಇದರಿಂದ ಅಲ್ಲಿಯ ಸರ್ಕಾರವು ಅಮೃತಸರ ನಿರ್ಣಯಗಳಿಂದ ದೂರಾಗುತ್ತಿದೆಯೆಂದು ಹೇಳುವಂತೇನಿಲ್ಲ" ಎಂದು ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತ ಅಜಯ್ ಘೋಷ್‌ರವರು ಹೇಳಿದರು. ಕೇರಳದ ಸಚಿವ ಸಂಪುಟದ ಪುನರ್ರಚನೆ ವಿಚಾರ, ಕೇರಳದ ವಾಸ್ತವಿಕ ಸ್ಥಿತಿ ಇವುಗಳನ್ನು ಸ್ಪಷ್ಟಪಡಿಸಿದ ಅವರ ಉತ್ತರಗಳು ಹೀಗಿದ್ದವು:

ಖೋಟಾ ಮತಗಳ ವಿಚಾರ

"ಬಿರ್ಲಾ ವ್ಯವಹಾರವೊಂದರ ಕಾರಣದಿಂದ ಮಂತ್ರಿ-ಸಂಪುಟದ ಬಗ್ಗೆ ವಿಚಾರಿಸುವ ಅಗತ್ಯವಿಲ್ಲ. ಆದರೂ ನಾವು ಸರಕಾರದ ನೀತಿಯನ್ನು ಪುನರ್ ಪರಿಶೀಲಿಸಲು ಪಾರ್ಟಿಯನ್ನು ಕೇಳಿಕೊಂಡಿದ್ದೇವೆ.

"ಖೋಟಾ ಮತದಾನದ ಬಗ್ಗೆ ನಮ್ಮ ಸಂಪುಟದ ಮೇಲೆ ಅನೇಕ ತೀವ್ರ ಆಪಾದನೆಗಳನ್ನು ಮಾಡಲಾಗಿದೆ. ವ್ಯಕ್ತಿಗತವಾಗಿ ಸಚಿವರನ್ನು ದೂರಲಾಗಿದೆ. ಆದರೆ ಸತ್ಯಾಂಶವೇನು ? ದೇವಿಕೊಳಂ ಉಪಚುನಾವಣೆಯಾದ ದೀರ್ಘಕಾಲದ ಬಳಿಕ ಇಂಥ ಆಪಾದನೆಗಳನ್ನು ಹೊರಿಸುವದರ ಅರ್ಥವೇನು ? ಅದಕ್ಕೂ ಮೊದಲೇಕೆ ಮಾಡಲಿಲ್ಲ ? 10,000 ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸಲಾಯಿತೆಂಬ ಗೂಢಮಯವಾದ ಆಪಾದನೆಯಿದೆ. ಸಂಪೂರ್ಣ ನಿಜಸ್ಥಿತಿಯನ್ನು ಹೇಳಲಾಗಿಲ್ಲ. ಕರಡು ಮತದಾರರ ಪಟ್ಟಿ ಪ್ರಕಟವಾದ ಬಳಿಕ ಕಾಂಗ್ರೆಸ್ಸು 5,859 ಹೊಸ ಮತದಾರರ ಹೆಸರುಗಳನ್ನು ಕೊಟ್ಟಿತು, ಮತ್ತು ಕಮ್ಯೂನಿಸ್ಟ್ ಪಾರ್ಟಿ 3,529 ಹೊಸ ಹೆಸರುಗಳನ್ನು ಕೊಟ್ಟಿತು. ಇದಲ್ಲದೆ 500 ಹೊಸ ಹೆಸರುಗಳನ್ನು ವ್ಯಕ್ತಿಗತವಾಗಿ ಕೆಲವರು ಕೊಟ್ಟರು. ಆಗ ಕಾಂಗ್ರೆಸ್ಸಿಗರಾಗಲಿ, ಕಮ್ಯೂನಿಸ್ಟರಾಗಲಿ ಯಾರೂ ಈ ವಿಷಯವಾಗಿ ಒಬ್ಬರ ಮೇಲೆ ಇನ್ನೊಬ್ಬರು ಆಕ್ಷೇಪವೆತ್ತಲಿಲ್ಲ.



ಮದರಾಸಿನಲ್ಲಿ

ಕಾಂ॥ ಅಜಯ ಘೋಷ್

ಘೋಷಣೆ

ಕಮ್ಯೂನಿಸ್ಟರ ಹುಟ್ಟಡಗಿಸಲು ನಿರ್ಧಾರ

"ಜವಾಬ್ದಾರಿಯುತರಾದ ವಿರೋಧಿ ಪಕ್ಷದವರು ಮತ್ತು ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಅವರು ಅತ್ಯಂತ "ಗಂಭೀರ" ಆರೋಪಗಳನ್ನು ಮಾಡುತ್ತ, ಕಾಂಗ್ರೆಸ್ಸು ಮೊದಲು ಅಪ್ರಜಾಸತ್ತಾತ್ಮಕವಾದ ಕಮ್ಯೂನಿಸ್ಟ್ ಪಾರ್ಟಿಯನ್ನು ಏಕಾಂಗಿಯಾಗಿಸಿ ಆ ಮೇಲೆ ಅವರ ಹುಟ್ಟಡಗಿಸಲು ಪ್ರಜಾಸತ್ತಾತ್ಮಕ ವಿಧಾನಗಳನ್ನನುಸರಿಸುವದೆಂದು ನಿರ್ಧರಿಸಿದ್ದರು, ಹೀಗೆಂದು ಹೇಳಿದ್ದರು. ಕಾಂಗ್ರೆಸ್ ಪಕ್ಷದ ಮಾಜೀ ಮುಖ್ಯ ಮಂತ್ರಿಗಳೊಬ್ಬರು ಗಿರಣಿಯೊಂದರ ಮುಷ್ಕರದ ವಿಚಾರದಲ್ಲಿ ಮಾತನಾಡುತ್ತ ಸರ್ಕಾರ ಸಮಸ್ಯೆಯನ್ನು ಬಗೆಹರಿಸುವಲ್ಲಿ ತಪ್ಪು ದಾರಿ ಹಿಡಿದಿದೆ. ಅದಕ್ಕಾಗಿ ಪೋಲೀಸರೂ ಮಿಲಿಟರಿಯವರೂ ಸರಕಾರದ ಆಜ್ಞೆಗಳನ್ನು ಪಾಲಿಸಬಾರದು ಎಂದು ಹೇಳಿದರು. ಕಮ್ಯೂನಿಸ್ಟ್ ಪಾರ್ಟಿಯು ಎಲ್ಲಾದರೂ ಪೋಲೀಸರಿಗಾಗಲಿ, ಸೈನಿಕರಿಗಾಗಲಿ ಸರಕಾರದ ಆಜ್ಞೆಗಳನ್ನು ಪಾಲಿಸಬೇಡಿ ಎಂದು ಹೇಳಿದ ನಿದರ್ಶನಗಳು ಇವೆಯೆ ? ಮೇಲಿನ ವಿಧಾನಗಳನ್ನು ಕಮ್ಯೂನಿಸ್ಟರು ಯಾವ ರಾಜ್ಯದಲ್ಲಾದರೂ ಅನುಸರಿಸಿದ್ದಾರೆಯೆ? ಕಮ್ಯೂನಿಸ್ಟ್ ಸರ್ಕಾರವು ಕೇರಳದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಸಾರ್ವಜನಿಕ ಸಭೆಯಲ್ಲಿ ನಾಯಕರ ಭಾಷಣಗಳು ನಡೆದಾಗ ಪೋಲೀಸರು ಷಾರ್ಟ್‌ಹ್ಯಾಂಡ್ ವರದಿ ತೆಗೆದುಕೊಳ್ಳಕೂಡದೆಂದು ವಿಧಿಸಿತು. ಇದು ಅಪ್ರಜಾಸತ್ತಾತ್ಮಕವಾದುದೆ ?

ನ್ಯಾಯಾಂಗದಲ್ಲಿ ಸರಕಾರದ ಪ್ರವೇಶ

"ನ್ಯಾಯಾಂಗದಲ್ಲಿ ಸರ್ಕಾರವು ಪ್ರವೇಶಿಸುತ್ತಿದೆಯೆಂಬ ಆರೋಪಗಳನ್ನು ಮಾಡಲಾಗಿದೆ. ಆದರೆ ಅದರಲ್ಲಿ ಎಷ್ಟು ಅರ್ಥವಿದೆ ನೀವೆ ನೋಡಿ. ಮೆಜೇಸ್ಟ್ರೇಟರೊಬ್ಬರು ಫಸ್ಟ್ ಕ್ಲಾಸ್ ಪವರ್ ನಿಂದ ಕೆಳಗಿಳಿಸಲ್ಪಟ್ಟರೆಂಬ ಆಪಾದನೆಯಲ್ಲಿ ಸತ್ಯಾಂಶವಿಲ್ಲ. ಮೇಜಿಸ್ಟ್ರೇಟರುಗಳಿಗೆ ಫಸ್ಟ್ ಕ್ಲಾಸ್ ಪವರನ್ನು ಕೊಡುವ ಅಧಿಕಾರ ಹೈಕೋರ್ಟಿಗಿರುತ್ತದೆ. ಹೈಕೋರ್ಟಿನ ಶಿಫಾರ್ಸಿನ ಪ್ರಕಾರವೇ ಸರಕಾರವು ವರ್ಗಾವಣೆಯ ಆಜ್ಞೆಯನ್ನು ಹೊರಡಿಸಿತು. ಸೆರ್ಷ ಜಡ್ಜ್‌ರೊಬ್ಬರು ಒಂದು ದಾವೆಯನ್ನು ವಾಪಸ್ ಮಾಡಲು ತಿರಸ್ಕರಿಸಿದುದರಿಂದ ಅವರನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನಾಗಿ ಮಾಡಲಾಯಿತೆಂದು ಒಂದು ಆರೋಪ. ಆದರೆ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ಲು ರದ್ದುಗೊಳಿಸಿದುದಕ್ಕಾಗಿ ಜೂನಿಯರ್ ಪೋಸ್ಟ್ ಸೆಷನ್ಸ್ ಜಡ್ಜ್‌ರೊಬ್ಬರನ್ನು ಜಿಲ್ಲಾ ಮ್ಯಾಜಿಸ್ಟ್ರೇಟರನ್ನಾಗಿಸಲಾಯಿತು ಅಷ್ಟೆ. ಆಗ ಇನ್ನೊಂದು ಸ್ಥಳ ಖಾಲಿಯಾದಾಗ ಮತ್ತೆ

"ಜಗತ್ತಿನ ರಾಷ್ಟ್ರಗಳು ಅನುಸರಿಸಬೇಕಾದ ಪಂಚಶೀಲ ನೀತಿಯನ್ನು ಒಂದು ದೇಶವು ತನ್ನ ಆಂತರಿಕ ವ್ಯವಹಾರದಲ್ಲಿಯೂ ಅನುಸರಿಸಬಹುದು. ಒಂದು ಕುಟುಂಬದಲ್ಲಿ ಗಂಡ ಹೆಂಡಿರಿರೂ ಅನುಸರಿಸುವಂಥದು." ಎಂದು ಪ್ರಧಾನಿ ನೆಹ್ರೂ ಇತ್ತೀಚೆಗೆ ಹೇಳಿದರು.

ಬಂಡವಾಳಶಾಹೀ ರಾಷ್ಟ್ರಗಳನ್ನು ಮತ್ತು ಸಮಾಜವಾದೀ ರಾಷ್ಟ್ರಗಳನ್ನು ಕುರಿತೇ ಪ್ರಧಾನಿ ಈ ಮಾತನ್ನು ಹೇಳಿರಬಹುದು. ಅವರು ರಷ್ಯಾ—ಅಮೇರಿಕಾಗಳು ಸಹಜೀವನ ನಡೆಸಲು ಪಂಚಶೀಲ ಬೋಧಿಸುತ್ತಾರೆ, ಗಂಡ-ಹೆಂಡಿರ ಸಣ್ಣ ಮಿತಿಯ ಕುಟುಂಬದಲ್ಲೂ ಶಾಂತಿಯುತ ಬಾಳ್ವೆಗ ಪಂಚಶೀಲ ಬೋಧಿಸುತ್ತಾರೆ. ಆದರೆ ಪ್ರಧಾನಿ ನೆಹ್ರೂ ಮಾತ್ರ ಒಂದು ವಿಷಯದಲ್ಲಿ ತುಂಬಾ ನಿಶ್ಯಕ್ತರೆಂದು ಕಾಣುತ್ತದೆ. ಅದು ಗಂಡಹೆಂಡಿರಿಗಿಂತಲೂ, ರಷ್ಯಾ-ಅಮೇರಿಕಾಗಳಿಗಿಂತಲೂ ದೊಡ್ಡದಾದ ಸಮಸ್ಯೆ ಇರಬೇಕು ಅವರ ಪಾಲಿಗೆ-ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರದೊಂದಿಗೆ ಒಂದಾಗಿ ಬಾಳುವುದೇ.

೦ ೦ ೦

ನ್ಯಾಯವಾಗಿ ಇಲ್ಲೂ ಪಂಚಶೀಲವನ್ನು ಕಾಂಗ್ರೆಸ್ಸಿಗರು ಅನುಸರಿಸಬಹುದಾಗಿತ್ತು. ಆದರೆ ಅವರಿಲ್ಲಿ ಅನುಸರಿಸುತ್ತಿರುವುದು ಪಂಚಚೀಲ ತತ್ವವಾಗಿದೆ. ಆ ಪಂಚಚೀಲದಲ್ಲಿರುವ ಸಾಮಗ್ರಿಗಳಿವು;

1) ಅಶಾಂತಿಯುತ ಅಸಹ(ನೀಯ) ಜೀವನ.

2) ಅಧಿಕಾರ ದಾಹದ ಹಸ್ತಕ್ಷೇಪ.

3) ಆಡಳಿತ ವ್ಯವಹಾರಗಳಲ್ಲಿ ಕೈ ಕಾಲು ತಲೆಗಳನ್ನೆಲ್ಲ ಸೇರಿಸುವುದು

4) ಬಲವಂತದಿಂದ ಅಶಾಂತಿಯ ಸೃಷ್ಟಿ.

5) ಪ್ರತಿಪಕ್ಷಗಳವರ ಪರಸ್ಪರ ಲಾಭ

ಕೇರಳದ ಬಗ್ಗೆ ಕೆಲವು ಪತ್ರಿಕೆಗಳು

● **ಸಿಯಾಸತ್ :** ಹೈದರಾಬಾದಿನಿಂದ ಹೊರಡುವ ಈ ಉರ್ದೂ ದಿನ ಪತ್ರಿಕೆ ಆಗಸ್ಟ್ 10ರ ಸಂಪಾದಕೀಯದಲ್ಲಿ ಕೇರಳದಲ್ಲಿಯ ಪ್ರತಿಪಕ್ಷಗಳ ವರ್ತನೆಯ ಬಗ್ಗೆ ತೀವ್ರ ವಿಷಾದ ವ್ಯಕ್ತಪಡಿಸಿ ಕೇವಲ ಕೇರಳ ರಾಜ್ಯ ಕಾಂಗ್ರೆಸ್ ಸಮಿತಿಯ ವರದಿಯನ್ನೇ ಅವಲಂಬಿಸಿ ತೀರ್ಪನ್ನೀಯುವುದು ತಪ್ಪು ಎಂದು ಹೇಳಿತು.

● **ಪ್ರಭಾತ :** ಪಂಜಾಬಿನ ಅಕಾಲಿ ದಳದವರ ಈ ಪತ್ರಿಕೆ "ನಿಷ್ಪಕ್ಷಪಾತವಾದ ವಿಚಾರಣೆಯಿಲ್ಲದೆ ಪ್ರಧಾನ ಮಂತ್ರಿಯು ಸಾರ್ವಜನಿಕವಾಗಿ ಕೇರಳವನ್ನು ಟೀಕಿಸಿ ತಪ್ಪು ಮಾಡಿದ್ದಾರೆ. ಸರ್ಕಾರಗಳನ್ನು ರಚಿಸುವಲ್ಲಿ ಕಾಂಗ್ರೆಸ್ಸು ಮಾತ್ರ ಗುತ್ತಿಗೆ ಪಡೆದಿಲ್ಲವೆಂಬುದನ್ನು ಕಾಂಗ್ರೆಸ್ ತಿಳಿದುಕೊಳ್ಳುವ ಕಾಲ ಈಗ ಬಂದಿದೆ" ಎಂದು ಹೇಳಿತು.

● **ಆಜ್ :** ಬನಾರಸ್‌ನಿಂದ ಪ್ರಕಟವಾಗುವ ಈ ಪತ್ರಿಕೆ "ಪುನರ್ರಚನೆಯಲ್ಲಿ ತೊಡಗಿರುವ ಈ ಕಾಲಾವಧಿಯಲ್ಲಿ ಹಿಂಸಾತ್ಮಕ ಪಕ್ಷೀಯ ಕಲಹಗಳಲ್ಲಿ ಕಾಲಕಳೆಯುವದು ತರವಲ್ಲ. ಭಾರತವು ಆರ್ಥಿಕವಾಗಿ ಭದ್ರವಾಗುವ ವರೆಗೂ ಎಲ್ಲಾ ಪಕ್ಷಗಳೂ ರಾಷ್ಟ್ರೀಯ ಪುನರ್ರಚನಾ ಕಾರ್ಯದಲ್ಲಿ ಒಂದಾಗಬೇಕು. ಭಾರತದಲ್ಲಿ ಸಜೀವವಾದ ಸಹಜೀವನವಿರಲಿ" ಎಂದು ಹೇಳಿತು.

ನಮ್ಮಲ್ಲಿ

● **ಪ್ರಜಾವಾಣಿ :** ಬೆಂಗಳೂರಿನಿಂದ ಪ್ರಕಟವಾಗುವ ಈ ಪ್ರಮುಖ ಕನ್ನಡ ದಿನ ಪತ್ರಿಕೆ ಆಗಸ್ಟ್ 7ರ ಸಂಚಿಕೆಯಲ್ಲಿ ಸಂಪಾದಕೀಯ ಬರೆಯುತ್ತ "ಕೇರಳ ಜನತೆ ಪ್ರಜಾಪ್ರಭುತ್ವಾತ್ಮಕ ರೀತಿಯಲ್ಲಿ ಆರಿಸಿಕೊಂಡ ಆಡಳಿತದ ವಿರುದ್ಧ ಅಸಕ್ತ ಹಿತಗಳು ಕತ್ತಿ ಎತ್ತಿ ನಿಂತಿರುವುದು ಅಸಹನೀಯ ಪರಿಸ್ಥಿತಿಗಳಿಗೆಡೆಕೊಟ್ಟಿದೆ. ಸ್ವಾತಂತ್ರ್ಯ ಸಾಧನೆಯಾದ ದಿನದಿಂದಲೂ ಕೇರಳದಲ್ಲಿ ಸುಭದ್ರ ಸರ್ಕಾರವನ್ನು ರಚಿಸುವ ಪ್ರಯತ್ನದಲ್ಲಿ ವಿಫಲ ಸಾಹಸ ನಡೆಸಿದ ಕಾಂಗ್ರೆಸ್ ಮತ್ತು ಪ್ರಜಾಸೋಷಲಿಸ್ಟ್ ಪಕ್ಷಗಳು, ತಾವು ಸಾಧಿಸಲಾರದುದನ್ನು ಬೇರೆಯವರು ಸಾಧಿಸದಂತೆ ಮಾಡುವ ನೀತಿಯನ್ನು ಅನುಸರಿಸುತ್ತಿರುವುದು ಜನತೆಯ ದುರದೃಷ್ಟ. ಕೇರಳದಲ್ಲಿ ಕಮ್ಯೂನಿಸ್ಟರು ಆಡಳಿತಕ್ಕೆ ಏರಿದಂದಿನಿಂದ ಅಖಿಲ ಭಾರತ ಕಾಂಗ್ರೆಸ್ಸಿನ ಸೂತ್ರಧಾರಿಗಳಾದಿಯಾಗಿ ಎಲ್ಲರೂ ಅವರನ್ನು ಟೀಕಿಸುವುದನ್ನೇ ಮುಖ್ಯ ಕಸಬಾಗಿ ಮಾಡಿಕೊಂಡಿರುವಂತೆ ವರ್ತಿಸುತ್ತಿದ್ದಾರೆ. ಈ ನೀತಿ ಪ್ರಜಾಪ್ರಭುತ್ವಕ್ಕೆ ಮುಸುಕು ಹಾಕಿದ ಅಧಿಕಾರ ದಾಹದ ಪ್ರತೀಕವೆನ್ನದೆ ವಿಧಿಯಿಲ್ಲ."

ಚುಟು
ಒಂದು ಪ್ರಶ್ನೆ
ಹೊಲೆಯ ಮಾ
ಅಂತರ—
ನಿಗ್ರೋನೇತ್ರರ
ಮೂಗು ಮ
ಬಡವನ ಬದ
ಅಲ್ಲಿ ನಾಯಿ
ಇಲ್ಲಿ
ಅಲ್ಲಿ–ಇಲ್ಲಿ
ಬದು

ಅವರಿಗೇ ಸೆಷ
ಕೊಡಲಾಯಿತ
ಇನ್ಸ್‌ಪೆಕ್ಟರೊ
ಬಾ ಟೀಕೆಗಳು
ಸಬ್ ಇನ್ಸ್‌ಪೆ
ದಿನಗಳಿಂದ ಬ
ಅದನ್ನು ಕಾಯ
ಷ್ಟೆ. ಸಂಬಂಧಿ
(೬ನೇ

ಪ್ರ

ಕ್ಕಾಗಿ ಪರಸ್ಪರ
ವನ್ನು ನಾಶವ
೦
ಕೇರಳದಲ್ಲಿ
ನಾ ಸ್ಥಾಪನೆ
ವ್ಯವಸ್ಥೆಗೆ ತಾ
ಯನ್ ಕೋ
ತಪ್ಪು ಅಭಿಪ್ರಾ
ಯಿದೆಯೆಂದು
ಗ್ರೆಸ್, ಪಿ.
ಕಾರಣವೆಂದ
ಗುರು ಸುಪ್ರ
ವರು ಪತ್ರಿಕ
ದ್ದಾರೆ.
ಇದು ನಿ
ಯ. ಫಾದ
ಸೇನಾ ಸ್ಥಾ
ಕೇರಳದ ಪ್ರ
ದರ್ಶನದಲ್ಲಿ
"ಕಮ್ಯೂ
ದರೆ ನಮ್ಮ
ದಿಂದ ಹೋ
ವರು ಹೇಡಿ
ಹಲ್ಲುಗಳನ
ಗಂಕರೆಲ್ಲಾ
ಬೇಕು".
೦
"ಕಮ್ಯೂ
ನ್ನು ಎದುರ
ಚೆಗೆ ಉಪವ
ಕಾಂಗ್ರೆಸ್
[

ತು ರು ಕು
ರಿಜನ'ರೆಂಬರು
ಇದೆ.
ಕಂಡು
ಗಿದೆಯೆ ಎದೆ ?
ಭೋಗ;
ಗೌರವ
ಬೋರಗೆ
3 ರೌರವ
ಅಕಬರ್ ಅಲಿ

ನೀವೇನು ಹೇಳುತ್ತೀರಿ

ಮೈಸೂರಲ್ಲಿ ಇತ್ತೀಚೆಗೆ ವ್ಯವಸಾಯ ಸಮ್ಮೇಳನ ನಡೆಯಿತು. ದೂರದಿಂದ ಪ್ರಧಾನಿ ನೆಹ್ರೂ ಹಾರಿಬಂದಿದ್ದರು. ಹತ್ತಿರದ ಬೆಂಗಳೂರಿನಿಂದಲೂ ಸಚಿವ ಸಂಪುಟ ಪ್ರಯಾಣ ಮಾಡಿತ್ತು.

ಇದು ವ್ಯವಸಾಯ ಸಮ್ಮೇಳನವಾದ್ದರಿಂದ ವ್ಯವಸಾಯ ಶಾಖಾ ಸಚಿವರೊಬ್ಬರು ಹೋಗಿದ್ದರೆ ಸಾಕಾಗಿತ್ತು, ಇವರಿಗೆಲ್ಲ ಏನು ಕೆಲಸ ಎಂದು ನೀವು ಹೇಳಬಹುದು. ಹೋಗುವವರು ಅವರು, ಬರುವವರು ಅವರು. ನೀವೇಕೆ ಯೋಚನೆ ಮಾಡಬೇಕು ಬಿಡಿ.

ಆದರೆ ಅಂದು ಬೆಂಗಳೂರಿನಲ್ಲಿ ಒಬ್ಬ ಸಚಿವರೂ ಇರಲಿಲ್ಲ. 17 ಜನರೂ ಮೈಸೂರಿಗೆ ತೆರಳಿದ್ದರು. ಇದರಿಂದ ಸರ್ಕಾರಕ್ಕಾಗಿರುವ ಖರ್ಚಿನ ಅಂದಾಜು ಸುಮಾರು 7000 ರೂಪಾಯಿ. ದೇಶದ ಪ್ರಧಾನಿ ಬಂದಿದ್ದಾರೆಂದು ಅವರಿಗೆ ಗೌರವ ಸಲ್ಲಿಸಲು ಈ ಮಂತ್ರಿ ಮಹಾಶಯರು ತಮ್ಮ ಸ್ವಂತ ಖರ್ಚಿನಲ್ಲಿ ಹೋಗಿದ್ದರೆ ಇವರಿಗೆ ಷಹಭಾಷ್ ಅನ್ನಬಹುದಾಗಿತ್ತು. ಆದರೆ ಬಡಬೋರೆಗೌಡ ತೆರುವ ತೆರಿಗೆಯಲ್ಲಿ ಮಾಡುವ ಈ ಖರ್ಚಿಗೆ ಏನನ್ನೋಣ? ಮಿತವ್ಯಯ ಮಿತವ್ಯಯ ಒಂದೆಡೆ ಬೊಬ್ಬೆಕುಟ್ಟುವ ಸರ್ಕಾರ ಇನ್ನೊಂದೆಡೆ ಇಂಥ ಅದೆಷ್ಟೋ 'ಅಪವ್ಯಯ'ಗಳನ್ನು ಅರಿತೇ ನಡೆಸಿದೆ.

ಅವೆಲ್ಲ ಬಯಲಿಗೆ ಬರಬೇಕಾಗಿದೆ. ಅಲ್ಲವೇ ?

o o o

ಜೂಲೈ 6ನೇ ತಾರೀಖಿನ 'ಜನಶಕ್ತಿ'ಯಲ್ಲಿ ಅಧಿಕಾರದಲ್ಲಿರುವ ಮಹಾಶಯರು ತಮ್ಮ ಸಂಬಂಧಿಗಳ ಹಿತಚಿಂತನೆಯನ್ನು ನೋಡಿಕೊಳ್ಳುವ ಸರಪಣಿಯನ್ನೇ ನಿಮ್ಮ ಮುಂದೆ ತೋರಿಸಲಾಗಿತ್ತು. ಅದು ಕೇಂದ್ರ ಸರ್ಕಾರದ ಅಥವಾ ಉನ್ನತಮಟ್ಟದಲ್ಲಿಯ ಸಂಬಂಧಿಗಳ ಕತೆ. ಆ ಹಿರಿಯಕ್ಕನ ಚಾಳಿ ತಂಗೆಂದಿರರಿಗೆ ಇರದಿದ್ದರೆ ಹೇಗಾದೀತು ? ಅದಕ್ಕಾಗಿ ಇಲ್ಲಿ ನಮ್ಮ ಮೈಸೂರಿನದೇ ಒಂದು ಕತೆ ಕೊಟ್ಟಿದೆ ಓದಿ—

ಮದರಾಸ್ ಮೆಡಿಕಲ್ ಕಾಲೇಜಿನಲ್ಲಿ ಕನ್ನಡ ವಿದ್ಯಾರ್ಥಿಗಳಿಗೂ ಸ್ಥಳವಕಾಶ ದೊರಕಿಸಿಕೊಡಲು ಮೈಸೂರು ಸರ್ಕಾರ ಸುಮಾರು 8 ಸಾವಿರ ರೂಪಾಯಿಗಳನ್ನು ತೆರುತ್ತಿದೆ. ಅಂಥ ಮೆಡಿಕಲ್ ವಿದ್ಯಾರ್ಥಿ ಸ್ಥಾನಕ್ಕೆ ನಮ್ಮ ಸಚಿವ ಶ್ರೀ ಕೆ.ಕೆ. ಹೆಗ್ಡೆಯವರ ಸಂಬಂಧಿಗಳನ್ನು ಚುನಾಯಿಸಲಾಯಿತು. ಚುನಾಯಿಸಲಾಯಿತೇನು— ಬಲವಂತದಿಂದಲೋ ಅಧಿಕಾರ ಬಲದಿಂದಲೋ ಪಡೆಯಲಾಯಿತು. ಅದು ಹೀಗಿದೆ:

ಶ್ರೀ ಹೆಗ್ಡೆಯವರ ಈ ಸಂಬಂಧಿಕ ಬ್ರಹ್ಮಾವರದ ಎಂ ಎಲ್.ಎ. ಆದ, ಹೆಂಚಿನ ಕಾರ್ಖಾನೆಯ ಜಗಜ್ಜೀವನ ಶೆಟ್ಟರ ತಮ್ಮ ಡಾಕ್ಟರ್ ಬಾಲಕೃಷ್ಣ ಶೆಟ್ಟರ ಪತ್ನಿ ಶ್ರೀಮತಿ ಅನುಸೂಯಾ ಅವರ ತಮ್ಮನಾದ ಪ್ರಕಾಶ ಭಂಡಾರಿ ಎಂಬವರಿಗೆ ದೊರಕಿದೆ! ಈ ಭಂಡಾರಿ ಮೂರನೆಯ ಸಲ ತೇರ್ಗಡೆಯಾಗಿ 44 ಗುಣಗಳನ್ನು ಪಡೆದ ಬ್ರಹ್ಮ!

ಇದು ಮದರಾಸಿನದಾಯಿತು. ಸ್ವಂತ ಮೈಸೂರಿನಲ್ಲೂ ಒಂದಿದೆ ಇಂಥದು.

ಮೈಸೂರು ಮೆಡಿಕಲ್ ಕಾಲೇಜಿನ ಇನ್ನೊಂದು ಸೀಟು ಹೆಗ್ಡೆಯವರ ಮತ್ತೊಬ್ಬ ಸಂಬಂಧಿಗೆ ದೊರಕಿದೆ. ಅವರಾರೆಂದರೆ —ಅದೇ ಎಂ. ಎಲ್. ಎ. ಜಗಜ್ಜೀವನದಾಸ ಶೆಟ್ಟರ ಅಳಿಯ ಮೋಹನದಾಸ ಶೆಟ್ಟಿ ಅವರಿಗೆ. ಇನ್ನೊಂದು ಸ್ಥಳ ಮಾಜೀ ಎಂ. ಎಲ್. ಎ.ಗಳಾದ ಕೊಳ್ಳೆಬೈಲರ ಸೊಸೆ ಮಾಲತಿ ಅವರಿಗೆ ಬಂದಿದೆ ಅವರು ಪಡೆದ ಗುಣಗಳೂ ಶೇ|| ೪೪ರಷ್ಟು.

ಆದರೆ ದಕ್ಷಿಣ ಕನ್ನಡದಿಂದ ಮೆಡಿಕಲ್ ಕಾಲೇಜಿಗೆ ಅರ್ಜಿ ಗುಜರಾಯಿಸಿದವರು ಇನ್ನೂ ಕೆಲವರಿದ್ದರು. ಅವರ ಪಟ್ಟಿ ಹೀಗೆ:

ಇಬ್ರಾಹಿಮ್, ಗುಣಗಳು ಶೇ|| 69. ಸುಮಿತ್ರಾ ನಾವಡ್, ಬಿ.ಎಸ್.ಸಿ., ಗು

(೯ನೇ ಪುಟ ನೋಡಿ)

ಅಲ್ಜೀರಿಯಾ ಹೋರಾಟಗಾರರಿಗೆ ಉದಾರ ನೆರವು ನೀಡಿರಿ

ಅಲ್ಜೀರಿಯಾ ವಿಮೋಚನಾ ರಂಗದ ಪ್ರತಿನಿಧಿ ಷೆರೀಫ್ ಜಲಾಲ್ ಅವರು ಕಳೆದ ವಾರ ಬೆಂಗಳೂರಿಗೆ ಆಗಮಿಸಿ ಅಲ್ಜೀರಿಯಾದಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟದ ನಿಜಸ್ವರೂಪವನ್ನೂ ಫ್ರೆಂಚ್ ಫಾಸಿಸ್ಟರ ನಾಚಿಕೆಗೇಡಿನ ನಡತೆಗಳನ್ನೂ ವಿವರಿಸಿ ಭಾರತೀಯ ಜನಕೋಟಿಯಿಂದ ಬೆಂಬಲವನ್ನಪೇಕ್ಷಿಸಿದರು. ಏಷ್ಯಾ–ಆಫ್ರಿಕಾಗಳಲ್ಲಿರುವ ವಸಾಹತುಷಾಹಿಗಳನ್ನು ಸಮೂಲವಾಗಿ ಒದ್ದೋಡಿಸುವುದು ಸ್ವಾತಂತ್ರ್ಯಪ್ರಿಯ, ದೇಶಗಳ ಜನತೆಗಳ ಕರ್ತವ್ಯವಾಗಿದೆ. ಇದನ್ನರಿತೇ ಶ್ರೀಮತಿ ರಾಮೇಶ್ವರಿ ನೆಹ್ರೂ, ಪಂಡಿತ ಸುಂದರಲಾಲ್ ಎಸ್. ಎ ಡಾಂಗೆ, ಸುಚೇತಾ ಕೃಪಲಾನಿ ಮೌಲಾನಾ ಹಿಫ್‌ಝುರ್ ರೆಹ್ಮಾನ್ ಎಂ. ಫರೂಕಿ, ರಮೇಶ್ ಚಂದ್ರ ಮುಂತಾದವರು ಅಲ್ಜೀರಿಯಾ ಸಹಾಯ ನಿಧಿಗೆ ಮನವಿ ಮಾಡಿಕೊಂಡು ರುಜು ಹಾಕಿದ್ದಾರೆ.

ಬೆಂಗಳೂರಿನಲ್ಲೂ ಅಲ್ಜೀರಿಯನ್ ಹೋರಾಟಗಾರರಿಗೆ ಬೆಂಬಲ ನೀಡಲು ಶ್ರೀಗಳಾದ ಕೆ. ಹನುಮಂತಯ್ಯ, ಟಿ. ಸಿದ್ಧಲಿಂಗಯ್ಯ, ಟಿ. ಕೆ. ಗಂಗಿ ರೆಡ್ಡಿ, ಡಾ|| ಬೆಹ್ಮಾನ್, ಎಂ. ಎಸ್. ಕೃಷ್ಣನ್, ವಿ. ಅಣ್ಣಯ್ಯ ಮತ್ತು ಸಿದ್ಧರಾಮಣ್ಣ ಅವರುಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿದೆ.

ಸಹಾಯನೀಡಬಹುದಾದ ಬೆಂಗಳೂರಿನ ವಿಳಾಸ:—

ಎನ್. ಸಿ. ರಣಸವರೆ,
ಅಲ್ಜೀರಿಯಾ ಸಹಾಯಕ ಸಮಿತಿ,
30/25 ಆರ್ಕಾಟ್ ಶ್ರೀನಿವಾಸಾಚಾರ್ ಸ್ಟ್ರೀಟ್, ಬೆಂಗಳೂರು 2.

ಈ ನೆರವನ್ನು ನೇರವಾಗಿ ಕಳುಹಿಸಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ಶ್ರೀಮತಿ ರಾಮೇಶ್ವರೀ ನೆಹ್ರೂ,
ಅಥವಾ ಶ್ರೀಮತಿ ಅರುಣ ಆಸಫ್‌ಅಲಿ
ಇಲ್ಲವೆ ಶ್ರೀ ಜಗಲ್ ಕಿಶೋರ್ ಖನ್ನಾ
Algeria Aid Committee
14—B, Queensway
Barrakks
NEW DELHI.

ಸಪ್ತಾಹ ಸ್ಫೂರ್ತಿ

ಇಲ್ಲಿ ನನ್ನ ಮುಂದೆ ಕೆಲವು ಚಿತ್ರಗಳು, ಅಂಕಿ ಸಂಖ್ಯೆಯೊಡನೆ ಕೆಲವು ಬರಹಗಳು ಇವೆ....

● ಚಿಟ್ಟನೆ ಚೀರಿ ಅಳುವ ಎಳೆಯ ಮಗುವೊಂದು ಹೆಣದ ಕೈಯನ್ನೋ ಕಾಲನ್ನೋ ಹಿಡಿದುಕೊಂಡು ಕುಳಿತಿದೆ. ಆ ಹೆಣ ಆ ಮಗುವಿನ ತಾಯಿ: ಎಳೆಯ ಮಗುವಿನ ಕಣ್ಣೆದುರಿನಲ್ಲೇ ಫ್ರೆಂಚ್ ಸೈನಿಕರು ತಾಯಿಯನ್ನು ಗುಂಡಿಕ್ಕಿ ಕೊಂದಿದ್ದಾರೆ.

● ಬಲಿಷ್ಠ ದೇಹದ ಮೀಸೆ ಹೊತ್ತ ಗಂಡುಗಲಿಯೊಬ್ಬ ಸತ್ತ ಹೆಣವಾಗಿ ಬಿದ್ದಿದ್ದಾನೆ. ಆತ ಫ್ರೆಂಚ್ ಸೈನಿಕರ ಕಗ್ಗೊಲೆಗೊಳಗಾಗಿ ಮಡಿದನು. ಅದರ ಕೆಳಗೆ ಹೀಗೆ ಬರೆಯಲಾಗಿದೆ:

"ನಾವು ಈ ದೇಶಕ್ಕೆ ಬಂದಾಗಿನಿಂದ ಪಾಲಿಸಿಕೊಂಡು ರಕ್ಷಿಸಿಕೊಂಡು ಬಂದ ಶಾಂತಿಯನ್ನು ಉಳಿಸಿಕೊಳ್ಳಲು ಹೀಗೆ ಉದ್ದೇಶಿಸಿದ್ದೇವೆ."

ಇದು ಫ್ರೆಂಚರೊಬ್ಬರ ಹೇಳಿಕೆ

● ಇನ್ನೊಬ್ಬ ಎಳೆಯ ಹುಡುಗೆ ಎದೆಯ ಮೇಲೆ ಕೈಯಿಟ್ಟುಕೊಂಡು ಸಾವಿನಲ್ಲಿ ಶಾಂತಿ ಪಡೆದಿದ್ದಾಳೆ. ಫ್ರೆಂಚರು ಆಕೆಯನ್ನು ಕರೆದುದ, ಹೀಗೆ "ಬಂಡಾಯಗಾತಿ".

● ಉದ್ದಕ್ಕೂ ಹೆಣಗಳ ಸಾಲೊಂದು ಬಿದ್ದಿದೆ. ಛಾಯಾಗ್ರಾಹಿ ತನ್ನ ಆಳತೆ ಮೀರಿ ಬಿದ್ದ ಹೆಣಗಳನ್ನು ಈ ಚಿತ್ರದಲ್ಲಿ ಅಳವಡಿಸಲೆತ್ನಿಸಿದ್ದಾನೆ. ಅದು ಸಾಧ್ಯವಾಗದುದರಿಂದ ಕೆಳಗೆ ವಿವರಣೆಯಿದೆ: ಆಗಸ್ಟ್ 20, 1955ರಂದು ಕಾನ್‌ಸ್ಟಂಟೈನ್ ಪ್ರದೇಶದಲ್ಲಿ ಒಂದೇ ದಿನ 10,000ಕ್ಕೂಹೆಚ್ಚು ಜನರು ಫ್ರೆಂಚ್‌ರಿಂದ ಹತ್ಯೆಗೊಳಗಾದರು.

● ನಾನು ಪರಿಚಯಿಸುತ್ತಿರುವ ಕೊನೆಯ ಚಿತ್ರವಿದು: ತಂದೆಯಾದವನೋ ಅಥವಾ ಇನ್ನಾರೋ ಅಳುತ್ತಿರುವ ಎಳೆಯ ಮಗುವನ್ನು ಕಂಕುಳಲ್ಲಿ ಹಿಡಿದುಕೊಂಡಿದ್ದಾನೆ. ಹತ್ತಿರದವರೋ, ಅಥವಾ ಸಂಬಂಧಿಗಳೋ ಯಾರೋ ಮೂರು ನಾಲ್ಕು ಜನ ಸ್ತ್ರೀ ಪುರುಷರು ಮುಖ ಮರೆಸಿಕೊಂಡು ಬಿಕ್ಕಳಿಸಿ ಅಳುತ್ತಿದ್ದಾರೆ. ಅಳುವ ಮಗುವಿನ ತಾಯಿಯನ್ನು ಅವನ ಹಾಗೂ ಇವರೆಲ್ಲರೆದುರು ಮಷಿನ್‌ಗನ್‌ನಿಂದ ಸುಟ್ಟುಹಾಕಿದ್ದಾರೆ ಫ್ರೆಂಚರು. ಅಲ್ಜೀರಿಯಾದ ಇಂಥ ಸಹಸ್ರಾರು ಪರದೇಶಿ ಕೂಸುಗಳು ಇದನ್ನೆಂದಿಗೂ ಮರೆಯವು.

● ಹಲವಾರು ಜನರು ದೀನ ಮೊಗದವರಾಗಿ ಉದ್ದಕ್ಕೂ ಭಯಭೀತರಾಗಿ ಆರ್ತತೆಯಿಂಡ ಕುಳಿತಿದ್ದಾರೆ. ಅವರೆದುರು ನಾಝಿ ಶಿರಸ್ತ್ರಾಣಗಳನ್ನು ಧರಿಸಿ ರುವ, ಅಮೆರಿಕನ್ ರೈಫಲ್ ಹೊತ್ತಿರುವ ಫ್ರೆಂಚ್ ಸೈನಿಕರು ನಿಂತಿದ್ದಾರೆ. ಈ ಬಡ ಅಲ್ಜೀರಿಯನ್ ಜೀವಿಗಳು ಅವರಿಗೆ ಏಕಾಪ್ಪೋಶನವಾಗಲಿರುವರು.

● ಆ ಮೇಲೆ ಇನ್ನೂ ಕೆಲವು ವಾಕ್ಯಾವಳಿಗಳು:

● 1956 ಆಗಸ್ಟ್ 15ರಂದು 'ಡೌರ್ ಸರಾಫ್' ಗ್ರಾಮದಲ್ಲಿ 95 ಜನ ಕ್ರಾಂತಿಕಾರರು ಗುಂಡಿಕ್ಕಿ ಕೊಲ್ಲಲ್ಪಟ್ಟರು. ಇದನ್ನು ತಿಳುಹಿಸಲು ನಾಚಿಕೆಪಟ್ಟ ಸರಕಾರದ ಪ್ರಕಟಣೆ ಸತ್ತವರು 45 ಜನ ಎಂದು ಹೇಳಿತು. ಆ ದಿನ ಸುಮಾರು 200 ಜನರಾದರೂ ಕೊಲ್ಲಲ್ಪಟ್ಟಿರಬೇಕು. ಕೊಲ್ಲಲ್ಪಟ್ಟ ಇವರಲ್ಲಿ ಚಿಕ್ಕವನೊಬ್ಬನ ವಯಸ್ಸು ಮೂರು ವರುಷಗಳು ಮಾತ್ರ.

● ಒಂದು ಹಳ್ಳಿಯಲ್ಲಿ (ಅಲ್ಲಿ ಈಗಲೂ ಸೈನಿಕರೇ ಬೀಡುಬಿಟ್ಟಿದ್ದಾರೆ) ಇಬ್ಬರು ಮುಸ್ಲಿಮರ ಹೆಣ್ಣು ಮಕ್ಕಳನ್ನು ಬಂಧಿಸಿದರು. ಹುಡುಗಿಯರ ವಯಸ್ಸು 16 ಮತ್ತು 18. ಇವರಿಬ್ಬರನ್ನೂ ಫ್ರೆಂಚ್ ಸೈನಿಕರ ರಾತ್ರಿಯ ಸಂತೋಷಕ್ಕಾಗಿ ತಳ್ಳಲಾಯಿತು ಮತ್ತು ಮಾರನೆಯ ದಿನ ಮುಂಜಾನೆ ಇಬ್ಬರನ್ನೂ ಸಂಹರಿಸಲಾಯಿತು.

ಈ ಪಟ್ಟಿ ಇಷ್ಟಕ್ಕೇ ಸಾಕು. ಮನುಷ್ಯರಾದವರೆಲ್ಲ ನಾಚಿಕೆಯಿಂದ ದೀರ್ಘವಾಗಿ ತಲೆಬಾಗಲು ನೆಲ ಅಡ್ಡಿ ಬರುವದರಿಂದ ಮುಂದಿನ ಕತೆ ಬೇಡ.

ಪ್ರಪಂಚಕ್ಕೆ ಸ್ವಾತಂತ್ರ್ಯ, ಸಮತೆ, ಸೋದರತ್ವಗಳ ಹಾಗೂ ಪ್ರಜಾಪ್ರಭುತ್ವ ತತ್ವಗಳ ಸಂದೇಶ ಬೀರಿದ ಫ್ರಾನ್ಸ್ ದೇಶದ ಗರ್ಭಪಾತದಲ್ಲಿ ಹುಟ್ಟಿದ ಫಾಸಿಸ್ಟ್ ಶಾಹಿಗಳು ಅಲ್ಜೀರಿಯಾದಲ್ಲಿ ನಡೆಸಿರುವ ನರಮೇಧದ, ಕಗ್ಗೊಲೆಯ ಕರಾಳ ಕತೆ ಇದು. ಅಲ್ಜೀರಿಯನ್ನರ ಅಪರಾಧವೆಂದರೆ — ಫ್ರೆಂಚರ ವಸಾಹತುಷಾಹಿಯ ಶೋಷಣೆಯ ಗಾಣದಿಂದ ಬಿಡುಗಡೆ ಹೊಂದಲು ಆಶಿಸುದುದೇ.

(೬ನೇ ಪುಟ ನೋಡಿ)

"ವೀತಾಶೋಕ"

ನಾರದ ವಾರ್ತಾ ಸಮೀಕ್ಷೆ

(೩ನೇ ಪುಟದಿಂದ)

ತನ್ನೂ ಒಂದೊಂದು ಹೆಜ್ಜೆಯನ್ನೂ ಕುತೂಹಲದಿಂದ ನಿರೀಕ್ಷಿಸಲಾಗುತ್ತಿದೆ. ಅರ್ಥ ಸಚಿವರು ವಿದೇಶಗಳಿಂದ ಎಷ್ಟು ಹೆಚ್ಚು ಸಾಲ ಮತ್ತು ಸಹಾಯ ಎತ್ತಿ ತರುವರೋ ಎಂದು ಸರಕಾರೀ ವೃತ್ತಗಳು ಆಸಕ್ತವಾಗಿರುವಾಗ, ಅವರೆಲ್ಲಿ ದೇಶದ ಹಿತಕ್ಕೂ ಗೌರವಕ್ಕೂ ಆಘಾತ ಮಾಡುವರೋ ಟಿ.ಟಿ.ಕೆ.ಯ ದಾರಿ ಹಿಡಿಯುವರೋ ಎಂದು ಪ್ರತಿಪಕ್ಷಗಳು ಎದುರು ನೋಡುತ್ತಿವೆ.

ಮೊರಾರ್ಜಿ ದೇಸಾಯಿಯವರು ಅಮೆರಿಕದ 'ಟೈಮ್' ಪತ್ರಿಕೆಗೆ ಕೊಟ್ಟಿರುವುದಾಗಿ ಪ್ರಕಟವಾಗಿರುವ ಹೇಳಿಕೆಯ ಅಂಶಗಳು ದೇಶದ ಮತ್ತು ಪ್ರಧಾನಿ ನೆಹ್ರೂರವರ ಗೌರವಕ್ಕೆ ಕುಂದು ತರುವಂತಹದೆಂದು ರಾಜ್ಯ ಸಭೆಯ ಕಮ್ಯೂನಿಸ್ಟ್ ಸದಸ್ಯ ಭೂಪೇಶ ಗುಪ್ತರವರು ಬಹಿರಂಗ ಪಡಿಸಿದ್ದಾರೆ. ಆ ಹೇಳಿಕೆಯಲ್ಲಿ ಭಾರತೀಯರ ಬಗ್ಗೆ "ಸಹೋದ್ಯೋಗಿಗಳ ವಿರುದ್ಧ ಮಾತನಾಡುವುದು ನಮ್ಮ ಕೆಟ್ಟಗುಣ. ನಾವು ದೈಹಿಕವಾಗಿ ಮಾನಸಿಕವಾಗಿ ಪುಕ್ಕಲು ಹಾಗೂ ದುರ್ಬಲ ಜನ. ಎರಡು ಸಹಸ್ರ ವರ್ಷಗಳ ದಬ್ಬಾಳಿಕೆ, ಪ್ರತಿಯೊಂದಕ್ಕೂ ಹೆದರಿಕೊಳ್ಳುವಷ್ಟು ಮಟ್ಟದ ರಾಷ್ಟ್ರದ ಧೈರ್ಯ ಸ್ಥೈರ್ಯವನ್ನು ಕುಗ್ಗಿಸಿತು. ಬ್ರಿಟಿಷರ ಆಧೀನದಲ್ಲಿದ್ದಾಗ, ತೆರಿಗೆಗಳಿಂದ ತಪ್ಪಿಸಿಕೊಳ್ಳಲು ನಾವು ಕಲಿತೆವು. ಕಳ್ಳತನದಲ್ಲಿ ಶಾಸನೋಲ್ಲಂಘನ ಮಾಡಿದೆವು, ಸುಳ್ಳು ಹೇಳುವುದು ಪ್ರಯೋಜನಕಾರಿಯೆಂದು ತಿಳಿದೆವು. ಆದರೆ ಜನ ಈಗ ಧೈರ್ಯದಿಂದ ಮಾತನಾಡಲಾರಂಭಿಸಿದ್ದಾರೆ" ಮತ್ತು ನೆಹ್ರೂರವರ ಬಗ್ಗೆ, "ಮೊದಲಿನಿಂದಲೂ ನೆಹರೂರವರನ್ನು ಪುರುಷಸಿಂಹನೆಂದು ಗೌರವಿಸಲಾಯಿತು. ಆದುದರಿಂದ ಅವರಲ್ಲಿ ಒಂದು ಬಗೆಯ ಅನಿವಾರ್ಯ ಮನೋಪ್ರವೃತ್ತಿ ಬೆಳೆಯಿತು. ಬೌದ್ಧಿಕವಾಗಿ ಅವರು ಸ್ವಪ್ರತಿಷ್ಠೆ ಇಲ್ಲದವರು, ಆದರೆ ಆಧ್ಯಾತ್ಮಿಕವಾಗಿಲ್ಲ. ಅವರಿಗೆ ದೇವರಲ್ಲಿ ನಂಬಿಕೆ ಇದ್ದಿದ್ದರೆ, ಮತ್ತೊಬ್ಬ ಗಾಂಧಿ ಆಗುತ್ತಿದ್ದರು. ಈಗಿರುವಂತೆ ನೆಹರೂ ವಿಜ್ಞಾನದ ಹಾದಿಯೇ ಏಕೈಕ ಹಾದಿ ಎಂದು ಭಾವಿಸುತ್ತಾರೆ."

ಹೀಗೆ ಮೊರಾರ್ಜಿಯವರು ಹೇಳಿರುವದಾಗಿ ವರದಿಯಾಗಿದೆ. ನಮ್ಮ ಅರ್ಥ ಸಚಿವರು ಸಾಲಕ್ಕೋ ಸಹಾಯಕ್ಕೋ ವಿದೇಶಗಳಿಗೆ ಹೋದಾಗಲೆಲ್ಲ ಭಾರತವನ್ನೂ ನೆಹ್ರೂರವರನ್ನೂ ಅವಹೇಳನ ಮಾಡಲೇಬೇಕೆಂದಿದೆಯೇನು? ಎಂದು ಭೂಪೇಶ ಗುಪ್ತರು ಕೇಳಿದ್ದಾರೆ.

ಸಹಾಯದ ಮತ್ತು ಸಾಲದ ಮಟ್ಟಿಗೆ ಹೇಳುವುದಾದರೆ, ಈತನಕ ನಮ್ಮ ಅವಶ್ಯಕತೆಗೆ ತಕ್ಕಷ್ಟು ಲಭಿಸುವ ಲಕ್ಷಣ ಕಂಡುಬಂದಿಲ್ಲ. ಅಮೇರಿಕ, ಪಶ್ಚಿಮ ಜರ್ಮನಿ, ಜಪಾನು ಮತ್ತು ಬ್ರಿಟನಿನ ಔದ್ಯೋಗಿಕ ಮುಗ್ಗಟ್ಟು ಹಾಗೂ ರಫ್ತು ವ್ಯಾಪಾರದ ಹಿಂದೇಟಿನ ಕಾರಣದಿಂದಾಗಿ ಈ ಸಂದರ್ಭದಲ್ಲಿ ಅವರುಗಳು ಮೊದಲಿಗಿಂತ ಹೆಚ್ಚು ಕೈ ಸಡಿಲು ಮಾಡುವ ಮನೋಭಾವ ತಳೆದಿದ್ದಾರೆ ಎಂದು ನಿರೀಕ್ಷಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

——

ಕೇರಳ ಸರಕಾರದಲ್ಲಿ ಜನರಿಗೆ ಸಂಪೂರ್ಣ ನಂಬಿಕೆ

(೪ನೇ ಪುಟದಿಂದ)

ರರು ಮುನ್ಸಿಪಲ್ ಕೌನ್ಸಿಲ್ಲರ ಮೇಲೆ ಕೈ ಮಾಡಿದರೆಂದು, ಸಂಬಂಧಿಸಿದ ಮುನ್ಸಿಪಲ್ ಕೌನ್ಸಿಲ್ಲು ಇವರ ಮೇಲೆ ಕ್ರಮ ಕೈಕೊಳ್ಳಬೇಕೆಂಬ ಗೊತ್ತುವಳಿಯನ್ನು ಅಂಗೀಕರಿಸಿತ್ತು. ಕಾಂಗ್ರೆಸ್ ಮತ್ತು ಪಿ. ಎಸ್. ಪಿ. ಸದಸ್ಯರುಗಳೆಲ್ಲರೂ ಇದಕ್ಕೆ ಸಂಪೂರ್ಣ ಸಮ್ಮತಿ ನೀಡಿದ್ದರು. ಈ ಕಾರಣದಿಂದ ಸಬ್ ಇನ್ಸ್‌ಪೆಕ್ಟರರನ್ನು ತನಿಖೆ ಮುಗಿಯುವವರೆಗೆ ಸಸ್ಪೆಂಡ್ ಮಾಡಲಾಗಿದೆ ಅಷ್ಟೆ.

ಕೇರಳದ ವಿಚಾರಣೆ

"ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವ್ಯವಹಾರದಲ್ಲಿ ಕೆಲವೊಂದು ಸಾಮಾನ್ಯ ವಿಧಿ-ನಿಯಮಗಳನ್ನನುಸರಿಸುವುದು ಅಗತ್ಯ. ದೇಶದ ಗೌರವದ ದೃಷ್ಟಿಯಿಂದಾದರೂ ಇದು ಬೇಕು. ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳೊಬ್ಬರು ಸಾರ್ವಜನಿಕ ಸಭೆಯಲ್ಲಿ ರಾಜ್ಯ ಸರ್ಕಾರವೊಂದನ್ನು ಟೀಕಿಸುವುದು, ಆ ರಾಜ್ಯದ ಮುಖ್ಯ ಮಂತ್ರಿ ಉತ್ತರ ಕೊಡುವಂತೆ ಬಲವಂತಪಡಿಸುವುದು ಸರಿಯೆ? ಕೇಂದ್ರ ಸರ್ಕಾರವೂ, ಪ್ರಧಾನ ಮಂತ್ರಿಯೂ ಎಲ್ಲಾ ರಾಜ್ಯಗಳಿಗೂ ಒಂದೇ ಸಮನಾದ ನೀತಿಯನ್ನನುಸರಿಸುವುದು ಬೇಡವೆ? ಕೇರಳದ ಬಗ್ಗೆ ಒಂದು ಮಟ್ಟದ ನೀತಿ, ಬೇರೆ ರಾಜ್ಯಗಳ ಬಗ್ಗೆ ಒಂದು ಮಟ್ಟದ ನೀತಿ ಇರುವುದು ಯಾವ ನ್ಯಾಯ? ಇದರ ಬಗ್ಗೆ ಗಂಭೀರವಾಗಿ ವಿಚಾರಿಸಬೇಕು. ಯಾಕೆಂದರೆ ಇನ್ನು ಮೇಲೆ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳಿಲ್ಲದೆ ಇರಬಹುದು. ಕಾಂಗ್ರೆಸ್ ಸರ್ಕಾರಗಳು ಕೆಲವು ಅತ್ಯಂತ ಟೀಕಾಸ್ಪದ ಸ್ಥಿತಿಯಲ್ಲಿರುವಾಗ ಕೇರಳದ ವಿಚಾರವಾಗಿ ಪ್ರಧಾನಿ ತೋರಿಸಿದ ನೀತಿಯನ್ನು ಅವುಗಳಿಗೂ ತೋರಿಸಲು ಮುಂದೆ ಬಂದಾರೆಯೆ? ಪಂಜಾಬ್ ಮತ್ತು ಪಶ್ಚಿಮ ಬಂಗಾಲಗಳ ಬಗ್ಗೆ ಅತ್ಯಂತ ಕಟುವಾದ ಗಂಭೀರವಾದ ಆರೋಪಗಳು ಮಾಡಲ್ಪಡುತ್ತಿರುವಾಗ ಪ್ರಧಾನಿ ಕೇರಳದ ವಿಚಾರದಲ್ಲಿ ಹೇಳಿದಂತೆ ಹೇಳಿಯಾರೆ?

"ಕೇಂದ್ರ ಸರ್ಕಾರವು ಯಾವುದೇ ರಾಜ್ಯದಲ್ಲಿ ವಿಚಾರಣೆ ನಡೆಸುವದನ್ನು ಕಮ್ಯೂನಿಸ್ಟ್ ಪಾರ್ಟಿಯು ಸಂಪೂರ್ಣವಾಗಿ ವಿರೋಧಿಸುತ್ತದೆ" ಎಂದು ಅವರು ಹೇಳಿದರು.

ಸಪ್ತಾಹ ಸ್ಫೂರ್ತಿ

(೫ನೇ ಪುಟದಿಂದ)

ಭಾರತದ ಮೂರನೆಯ ಎರಡು ಭಾಗದಷ್ಟಿರುವ ಅರೇಬಿಯನ್ ಭಾಷೆ, ಸಂಸ್ಕೃತಿ, ಜೀವನಗಳಿರುವ ಅಲ್ಜೀರಿಯಾ ಇರುವುದು ಉತ್ತರ ಆಫ್ರಿಕೆಯಲ್ಲಿ. ಸುಮಾರು ಹನ್ನೆರಡು ಮಿಲಿಯ ಜನ ಇಲ್ಲಿ ವಾಸಿಸುತ್ತಾರೆ. [ಯೂರೋಪಿಯನ್ನರು 850,000 ಜನ ಇರುವರು]. ಇಂಥ ಒಂದು ನಾಡು ಫ್ರಾನ್ಸಿನ ಒಂದು ಭಾಗವಂತೆ!

ಇಲ್ಲಿ ಸ್ವಾತಂತ್ರ್ಯ ಹೋರಾಟ ಆರಂಭವಾಗಿ ಇನ್ನೂ ಒಂದು ದಶಕವೂ ಕಳೆಯಲಿಲ್ಲ. ಆಗಲೇ ಫ್ರೆಂಚರು ನಾಲ್ಕು ವರುಷಗಳಲ್ಲಿ ಏನೂ ಅರಿಯದ 60 ಸಹಸ್ರ ಜನ ಸ್ತ್ರೀ ಪುರುಷರನ್ನು ಕೊಂದಿದ್ದಾರೆ. ಸಹಸ್ರಾರು ಜನರನ್ನು ಜೈಲಿಗಟ್ಟಿದ್ದಾರೆ. ಅವ್ಯಾಹತ ಕಗ್ಗೊಲೆ ನಡೆದಿದೆ. ಅಲ್ಜೀರಿಯನ್ ಜನತೆ ಫ್ರೆಂಚ್ ಫಾಸಿಸ್ಟ್‌ಷಾಹಿಯ ವಿರುದ್ಧ ಸುಸಂಘಟಿತವಾಗಿ ಹೋರಾಡುತ್ತಿದೆ. "ಇಂಡೋ-ಚೀಣಾದಲ್ಲಿಯಂತೆ ಇಲ್ಲೂ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ರಕ್ಷಿಸಲು ಹೋರಾಡುತ್ತಿದ್ದೇವೆ" (ಫ್ರೆಂಚ್ ಒಳಾಡಳಿತ ಸಚಿವರ ಹೇಳಿಕೆ!) ಎಂಬ ಫ್ರೆಂಚ್ ಸೋಗಲಾಡಿಗಳನ್ನು ಸದೆಬಡಿಯಲು ಅಲ್ಜೀರಿಯಾ ರಾಷ್ಟ್ರೀಯ ವಿಮೋಚನಾರಂಗ(FLN) ಪಣತೊಟ್ಟದೆ.

ಅಲ್ಜೀರಿಯಾ ಜನತೆಯು ಈ ಹೋರಾಟ ಪ್ರಪಂಚಕ್ಕೆ ಸರಿಯಾಗಿ ತಿಳಿಯಬೇಕಾಗಿದೆ. ಅವರಿಗೆ ನೈತಿಕ ಬೆಂಬಲವೂ ಬೇಕು, ವಾಸ್ತವಿಕ ಸಹಾಯವೂ ಬೇಕು.

ಈ ವಿಚಾರಗಳನ್ನು ತಿಳುಹಿಸಲು ಭಾರತದಲ್ಲಿರುವ ಅಲ್ಜೀರಿಯಾ ವಿಮೋಚನಾ ರಂಗದ ಪ್ರತಿನಿಧಿ ದಕ್ಷಿಣ ಭಾರತದ ಸಂಚಾರದಲ್ಲಿ ಕಳೆದ ವಾರ ಬೆಂಗಳೂರಿಗೂ ಭೇಟಿಯಿತ್ತರು. ಅವರೆ ಯುವಕ ಯೋಧ ಷರೀಫ್ ಜಲಾಲ್. ಉಡ್‌ಲೇಂಡ್ಸ್ ಹೋಟೆಲಿನಲ್ಲೊಂದು ಪತ್ರಿಕಾ ಗೋಷ್ಠಿ ಕರೆದಿದ್ದರು, ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಏಷ್ಯನ್ ಐಕ್ಯತಾ ಸಮಿತಿಯವರು ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ್ದರು. ಹೋರಾಟಕ್ಕೆ ನೆರವು ನೀಡಲು ಬೆಂಗಳೂರಿನಲ್ಲೊಂದು ಸಮಿತಿಯನ್ನೇರ್ಪಡಿಸಲಾಗಿದೆ. ಸ್ಥಳದಲ್ಲೇ ಅಲ್ಜೀರಿಯನ್ ಹೋರಾಟಗಾರರಿಗೆ ಔಷಧ ಸಾಮಾಗ್ರಿ, ಉಣ್ಣೆಬಟ್ಟೆ, ಮತ್ತು ಸುಮಾರು 64 ರೂ. ನಗದು ಹಣ ದೊರೆಯಿತು.

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟವನ್ನು ನೆನಸಿಕೊಂಡು, ಏಷ್ಯಾ ಆಫ್ರಿಕಾಗಳಿಂದ ವಸಾಹತುಷಾಹಿಗಳನ್ನು ಒದ್ದೋಡಿಸಲು, ಏಷ್ಯಾ ಆಫ್ರಿಕಾಗಳ ಬಿಡುಗಡೆಗಾಗಿ ಇಂಥ ಹೋರಾಟಗಳಿಗೆ ನೈತಿಕವಾಗಿಯೂ ಆರ್ಥಿಕವಾಗಿಯೂ ಬೆಂಬಲ ನೀಡುವುದು ಸ್ವಾತಂತ್ರ್ಯಪ್ರೇಮಿಗಳೆಲ್ಲರ ಕರ್ತವ್ಯ.

ಇದಕ್ಕೆ ನಿಮ್ಮ ಕಾಣಿಕೆ ಏನು?

ಆಯುರ್ವೇದ ವಿದ್ವಾನ್ ಬ.ವಿ ಪಂಡಿತರ
ಜೀವನಿ
ಗರ್ಭಾಶಯದ ವಿಕಾರಗಳಿಗೆ ಅತ್ಯುತ್ತಮ ಪ್ರತಿಕ್ರಿಯೆ.
ಶ್ರೀಕರ ಕಸ್ತೂರಿ ಮಾತ್ರೆ
ಮಕ್ಕಳ ಶೀತರೋಗಗಳಿಗೆ ಸಿದ್ಧೌಷಧ
ಆಮೋದಿನಿ
ಸ್ವರವರ್ಧಕ ಮಾತ್ರೆಗಳು.
ಸುಪ್ರಸಿದ್ಧವಾದ ನಂಜನಗೂಡು ಟೂತಪೌಡರನ್ನೇ ಉಪಯೋಗಿಸಿರಿ.
ದಿ ಸದ್ವೈದ್ಯಶಾಲಾ ಲಿ. ನಂಜನಗೂಡು.
ಶಾಖೆಗಳು: ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ.

ನಿಮ್ಮ ದುಃಖ, ನಮ್ಮ ದುಃಖ

ಜನಶಕ್ತಿ ಮುದ್ರಣ ಮಂದಿರದಲ್ಲಿ ಕಳೆದ ಕೆಲವು ಕಾಲ ದುಡಿಯುತ್ತಿದ್ದ ಶ್ರೀ ಬಿ. ಕೆ. ವೆಂಕಟೇಶ ಎಂಬವರು (ಕೇವಲ ಇಪ್ಪತ್ತು ವರ್ಷ ವಯಸ್ಸಿನ ತರುಣ) ಕ್ಷಯರೋಗ ಪೀಡನೆಯಿಂದ ಮಂಗಳೂರಿಗೆ (ದೇರೆಬೈಲ್) ಹೋಗಿದ್ದು, ಏಳೆಂಟು ತಿಂಗಳುಗಳಿಂದ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೊನ್ನೆ ತಾನೇ ಅವರಂತೆಯೇ ಅವರ ಅಣ್ಣನೂ ಕ್ಷಯರೋಗ ಪೀಡಿತರಾಗಿ ತಾ. 14—8—'58ಕ್ಕೆ ಮೃತಪಟ್ಟುದುದರಿಂದ, ಅದೇ ಚಿಂತೆಯಿಂದ ಊಟ, ಔಷಧಿ ಸೇವನೆಯನ್ನು ಕೂಡಾ ವೆಂಕಟೇಶ್ ಬಿಟ್ಟುಬಿಟ್ಟು, ತಾ. 28-8-'58ರಂದು ನಿಧನರಾದರೆಂದು ತಿಳುಹಿಸಲು ಅತೀವ ದುಃಖವಾಗುತ್ತದೆನಮಗೆ.

ಇವರ ಅಗಲುವಿಕೆಯಿಂದಾಗಿ, ಇವರ ಬಂಧುಗಳಿಗೆ ಉಂಟಾಗಿರುವ ದುಃಖದಲ್ಲಿ —ಜನಶಕ್ತಿ ಬಳಗದವರಾದ ನಾವೂ ಸಹಭಾಗಿಗಳಾಗಿದ್ದೇವೆ.

ಆರೋಪ ವಿಮುಕ್ತರು ಕಮ್ಯೂನಿಸ್ಟ್ ಕಾರ್ಯಕರ್ತರ ಬಿಡುಗಡೆ !

ಸೋಮವಾರಪೇಟೆ (ಕೊಡಗು)ಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರು ಕಳೆದ ವರುಷ ಕಮ್ಯೂನಿಸ್ಟ್ ನಾಯಕರಾದ ಕಾ|| ಡಾ|| ನಂಜುಂಡೇಶ್ವರ್ ಹಾಗೂ ಕಾ|| ಬಿ. ಎನ್. ಕುಟ್ಟಪ್ಪ ಅವರ ಮೇಲೆ ಹೂಡಿದ್ದ ಮೊಖದ್ದಮೆಯಲ್ಲಿ ಆಗಸ್ಟ್ 23 (1958)ರಂದು ಮ್ಯಾಜಿಸ್ಟ್ರೇಟರು ತೀರ್ಪನ್ನೀಯುತ್ತ ಆಪಾದಿತರಿಬ್ಬರೂ ತಪ್ಪಿತಸ್ಥರಲ್ಲವೆಂದು ಬಿಡುಗಡೆ ಮಾಡಿದರು.

ಡಾಕ್ಟರ್ ನಂಜುಂಡೇಶ್ವರ ಮತ್ತು ಬಿ. ಎನ್. ಕುಟ್ಟಪ್ಪ ಅವರಿಬ್ಬರೂ ಕಳೆದ ವರುಷ ಸೋಮವಾರ ಪೇಟೆನಾಡಿನ ಐಗೂರು ಗ್ರಾಮದಲ್ಲಿ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನಡೆದ ಸ್ವಾಂತಂತ್ರ್ಯ ದಿನಾಚರಣೆಯಂದು ಮಾಡಿದ ಭಾಷಣ ಇಂಡಿಯನ್ ಪಿನಲ್ ಕೋಡಿನ 117, 148, 322, 353 ಮತ್ತು 506ನೇ ನಿಬಂಧನೆಗಳ ಪ್ರಕಾರ ಹಿಂಸಾ ಪ್ರಚೋದಕವೆಂದು ಪೋಲೀಸು ಮೊಖದ್ದಮೆ ಹೂಡಿದ್ದರು.

ಕೊಳ್ಳೆಗಾಲ ಪಂಚಾಯ್ತಿ ಬೋರ್ಡು ಚುನಾವಣೆ

ಕಮ್ಯೂನಿಸ್ಟ್ ಪಾರ್ಟಿ ಬೆಂಬಲಿಗರ ವಿಜಯ

ಆಗಸ್ಟ್ 25ರಂದು ನಡೆದ ಕೊಳ್ಳೇಗಾಲ ಪಂಚಾಯಿತಿ ಬೋರ್ಡ್ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿ ಬೆಂಬಲದಿಂದ ಸ್ಪರ್ಧಿಸಿದ್ದ ಸ್ವತಂತ್ರ ಉಮೇದುವಾರ ಆರ್. ನಂಜ ಎಂಬವರು ಬಾಲಕೃಷ್ಣ ಎಂಬವರನ್ನು 174 ಮತಗಳಿಂದ ಸೋಲಿಸಿ ಆರಿಸಿ ಬಂದಿದ್ದಾರೆ. ಶ್ರೀ ಆರ್. ನಂಜರವರಿಗೆ 593 ಮತಗಳೂ, ಶ್ರೀ ಬಾಲಕೃಷ್ಣ ಅವರಿಗೆ 417 ಮತಗಳೂ ಬಂದಿವೆ.

ಆರ್. ನಂಜರವರು ಕೊಳ್ಳೇಗಾಲದಲ್ಲಿರುವ ಗೌರ್ನಮೆಂಟ್ ಫಿಲೇಚರ್‌ನಲ್ಲಿಯ ಕೆಲಸಗಾರರಾಗಿದ್ದು ಮೈಸೂರು ಡಿಸ್ಟ್ರಿಕ್ಟ್ ಸಿಲ್ಕ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರೀ ಸಮಿತಿಯ ಸದಸ್ಯರೂ ಆಗಿರುವರು.

ಭದ್ರಾವತಿಯ ಕಾಗದ

ಪೀಯಸ್ಪಿ ಕೌನ್ಸಿಲರುಗಳ ಸ್ಮರಣೀಯ ಕಾರ್ಯ

ಭದ್ರಾವತಿಯ ಹಳೇ ನಗರದಲ್ಲಿರುವ ಬಸವೇಶ್ವರ ಟಾಕೀಸಿನ ಪಕ್ಕದಲ್ಲಿರುವ ಖಾಲಿ ಜಾಗವನ್ನು ಕೇವಲ ಆರು ಸಾವಿರ (6000) ರೂ. ಗಳಿಗೆ ಮುನ್ಸಿಪಲ್ ಕೌನ್ಸಿಲ್ ಕೊಟ್ಟಿರುವುದಾಗಿ ತಿಳಿದುಬಂದಿದೆ. ಈ ಸೈಟುಗಳನ್ನು ಬಡಬಗ್ಗರಿಗೆ ಹಂಚದೆ ಬಸವೇಶ್ವರ ಟಾಕೀಸ್ ಮಾಲೀಕರಿಗೆ ಕೊಟ್ಟಿರುವುದಾಗಿ ಗೊತ್ತಾಗಿದೆ. ಈಗ ಕೊಟ್ಟಿರುವ ಜಾಗವು ಬಸವೇಶ್ವರ ಟಾಕೀಸಿನ ಎರಡರಷ್ಟಿದ್ದು ಬಸವೇಶ್ವರ ಟಾಕೀಸ್ ಜಾಗವನ್ನು 25,000ರೂ. ಗಳಿಗೆ ಹರಾಜು ಹಾಕಲಾಗಿತ್ತು. ಅದರ ಎರಡರಷ್ಟು ಜಾಗವನ್ನು, ಅದರ ಪಕ್ಕದಲ್ಲೇ ಇರುವದನ್ನು ಕೇವಲ 6 ಸಾವಿರ ರೂ. ಗಳಿಗೆ ಕೊಟ್ಟಿದರ ಮರ್ಮವೇನು? ಎಂಬುದಾಗಿ ಜನ ಕೇಳುತ್ತಿದ್ದಾರೆ. ಸಂಬಂಧಪಟ್ಟ ಮೇಲಾಧಿಕಾರಿಗಳು ಈವರೆಗೂ ಯಾವ ಕ್ರಮಗಳನ್ನು ಕೈಕೊಂಡಿಲ್ಲ.

ಭದ್ರಾವತಿಯ ಮುನ್ಸಿಪಾಲ್ಟಿಗೆ ಪಿ. ಎಸ್.ಪಿ. ಯವರು ಅಧಿಕಾರಕ್ಕೆ ಬಂದ ಬಳಿಕ ಜನರಿಗೆ ಮಾಡುತ್ತಿರುವ ಚಿರಸ್ಮರಣೀಯ ಉಪಕಾರಗಳಲ್ಲಿ ಇದೂ ಒಂದು.

ಪಿ. ಎಸ್. ಪಿ. ಅಧ್ಯಕ್ಷರಾದ ಶ್ರೀ ಅನ್ವರ್‌ರ ಉಚ್ಚಾಟನೆ

ಭದ್ರಾವತಿ ಪಿ.ಎಸ್.ಪಿ. ಶಾಖೆ ಅಧ್ಯಕ್ಷರಾದ ಶ್ರೀ ಅನ್ವರ್ ಖುದ್ದೂಸ್‌ರವರನ್ನು ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸೊಸೈಟಿಯ ಡೈರೆಕ್ಟರ್‌ಗಿರಿಯ ಹುದ್ದೆಯಿಂದ ಕಿತ್ತು ಹಾಕಲ್ಪಟ್ಟಿರುವುದಾಗಿ ತಿಳಿದಿದೆ. ಕಾರಣ ಇವರು ಸೊಸೈಟಿಗೆ ರೂ. 500/- ಬಾಕಿ ಕೊಡದಿರುವುದೇ ಆಗಿದೆ. ಕಣ್ಣಿಗೆ ಕಾಣುವ ವಿಚಾರವೇ ಹೀಗಿರುವಾಗ ಇವರುಗಳಿರುವ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕೂಲಿಗಾರರ ಸಂಘ, ಕಾಗದ ಕಾರ್ಖಾನೆಯ ಕೂಲಿಗಾರ ಸಂಘ, ಅವರ ಪ್ರೀತಿಯ ಪಿ.ಎಸ್.ಪಿ. ಪಕ್ಷ, ಮುನ್ಸಿಪಾಲ್ಟಿ ಇವುಗಳಲ್ಲಿಯ ಹಣದ ಲೆಕ್ಕಾಚಾರಗಳಿಗೆ ದೇವರೇ ಗತಿ ಎಂದು ಉಸಿರ್ಗರೆಯುತ್ತಿದ್ದಾರೆ ಜನ.

ಒಂದಾಣೆ ದಾರಕ್ಕಂತೆ!

ಬಿ.ಎ. ಜಲೀಲ್ ಬೀಡಿ ಫ್ಯಾಕ್ಟರಿಯಲ್ಲಿ ಕೆಲಸಮಾಡುವ ಬೀಡಿ ಕೆಲಸಗಾರರಿಂದ ಪ್ರತಿ ದಿನವೂ ಒಂದಾಣೆಯನ್ನು ಕಡ್ಡಾಯವಾಗಿ ವಸೂಲ್ ಮಾಡುತ್ತಿರುವುದಾಗಿ ತಿಳಿದುಬಂದಿದೆ. ಈ ಒಂದಾಣೆ ಬೀಡಿ ಕಟ್ಟುವ ದಾರಕ್ಕಂತೆ! ಪ್ರಪಂಚದಲ್ಲೇ ವಿಚಿತ್ರವಾದ ಸಂಗತಿ ಇದು. ಬಾರಕ್ಕೆ ಬಹಳೆಂದರೆ ಬೇಕಾಗುವುದು 3 ಕಾಸು, ಇವರು ವಸೂಲು ಮಾಡುವುದು 12 ಕಾಸು, ಅದಾದರೂ ಕೆಲಸಗಾರ ಯಾಕೆ ಕೊಡಬೇಕೋ? ಒಂದಾಣೆ ಕೊಡವಿದ್ದರೆ ಕೂಲಿ ಕಡಮೆ ಮಾಡುವ ಬೆದರಿಕೆಯನ್ನು ಬೇರೆ ತೋರಿಸುತ್ತಾರಂತೆ. ಕಾಸುಕಾಸಿಗೂ ನಡೆದಿರುವ ಈ ಶೋಷಣೆಯನ್ನು ಕಾರ್ಮಿಕರೆಲ್ಲ ಪ್ರತಿಭಟಿಸಬೇಕು.

"ಆಗ ಬಾ, ಈಗ ಬಾ, ಹೋಗಿ ಬಾ"

ಕಳೆದ ಎರಡು ವರ್ಷಗಳಿಂದ ಇಲ್ಲಿಯ ಕಾರ್ಮಿಕರು ತಮಗೆ ನ್ಯಾಯವಾಗಿ ದೊರಕಬೇಕಾದ ಬೆಂಗಳೂರಿನ ತುಟ್ಟಿ ಭತ್ಯಕ್ಕಾಗಿ ಬೇಡಿಕೆಯನ್ನು ತಮ್ಮ ಸಂಘದ ಮೂಲಕ ಮಂಡಿಸಿದ್ದರು. ಶಾಂತಿ ಒಪ್ಪಂದದ ಸಮಯದಲ್ಲೂ ಈ ತುಟ್ಟಿ ಭತ್ಯವನ್ನು ಕೊಡುವ ಭರವಸೆ ಬಂದಿತ್ತು. ಕಾರ್ಮಿಕರು ಜಾತಕ ಪಕ್ಷಿಯಂತೆ ಕಾದುಕೊಂಡೇ ಕುಳಿತರು.

ಗತಮಂತ್ರಿ ಮಂಡಳ ಕೂಲಿಕಾರ ಪ್ರತಿನಿಧಿಗಳನ್ನು 'ಬೆಂಗಳೂರಿಗೆ ಬನ್ನಿ ನೋಡುವಾ'-ಬೆಂಗಳೂರಿಗೆ ಹೋದರೆ 'ಭದ್ರಾವತಿಯಲ್ಲೇ ನೋಡುವಾ'-ಎಂದು ಬೆಂಗಳೂರು ಭದ್ರಾವತಿಗಳ ನಡುವೆ ಓಡಾಡಿಸಿದರು. ತಾವು ಹೊರಟು ಹೋಗುವ ಕಾಲಕ್ಕೆ "ನಾವು ಶಿಫಾರ್ಸು ಮಾಡಿದ್ದೇವೆ ಬರುವ ಹೊಸ ಮಂತ್ರಿಮಂಡಳ ಅಧಿಕಾರ ವಹಿಸಿಕೊಂಡ ಕೂಡಲೆ ನಿಮ್ಮ ತುಟ್ಟಿ ಭತ್ಯೆ ಪೂರೈಸಲ್ಪಡುತ್ತದೆ" ಎಂದರು. ಹೊಸ ಮಂತ್ರಿಮಂಡಳ ಬಂದು, ತುಟ್ಟಿಭತ್ತೆ ಬರಲಿಲ್ಲ. ಹಿಂದಿನ ಮಂತ್ರಿಮಂಡಳದ ವಿಳಂಬ ನೀತಿಯನ್ನೇ ಈ ಮಂತ್ರಿ ಮಂಡಳವೂ ಅನುಸರಿಸುತ್ತಿದೆ. ಇವರು 'ಆಗ ಬಾ ಈಗ ಬಾ' ಎಂಬ ನೀತಿಯಿಂದ ಸುಮ್ಮನೆ ಅಲೆದಾಡಿಸುತ್ತಿದ್ದಾರೆ. ಇದೇನು ಸರಕಾರವೊ, ಸಾಲ ಕೊಡುವ ಸಾಹುಕಾರನೋ? ಎಂದು ಕೂಲಿಗಾರ ವರ್ಗ ತೀವ್ರ ಬೇಸರವನ್ನು ವ್ಯಕ್ತಪಡಿಸಲಾಗುತ್ತಿದೆ. ತಮ್ಮ ಅಲ್ಪಸ್ವಲ್ಪ ಅನೈಕ್ಯತೆಯೂ ಕೂಡ ಸರಕಾರದ ಈ ಧೋರಣೆಗೆ ಕಾರಣವೆಂದು ಭಾವಿಸುತ್ತಿರುವ ಸಂಘದ ಪ್ರತಿನಿಧಿಗಳೂ, ಕೂಲಿಗಾರ ವರ್ಗವೂ ಈ ಎರಡು ವರ್ಷಗಳ ಬೇಡಿಕೆಯನ್ನು ಪಡೆಯಲು ಹೆಚ್ಚು ಬಲಶಾಲಿಗಳಾಗಲು ಇದೀಗ ದುಡಿಯಬೇಕಾಗಿದೆ.

ಲಂಚ—ಹಿಂಸೆ

ಬಾಗಲಕೋಟಿ ಸಿಟಿ ಸರ್ವೆ ಆಫೀಸರರ ದುರ್ವರ್ತನೆ ?

ಇಲ್ಲಿಯ ಸಿಟಿ ಸರ್ವೆ ಆಫೀಸರರಾದ ಶ್ರೀ ಮೇತ್ರಿ ಎಂಬವರು, ಸಾರ್ವಜನಿಕರು ತಮ್ಮ ಮನೆಗಳ ಪ್ರಾಪರ್ಟಿ ಉತಾರೆಗಳನ್ನು ಕೇಳಲಿಕ್ಕೆ ಹೋದರೆ ಒರಟುತನದಿಂದ ವರ್ತಿಸುತ್ತಾರೆ, ಜನರು ತಮ್ಮ ಆಸ್ತಿಯ ಉತಾರೆಗಳ ದೆಸೆಯಿಂದ ಅರ್ಜಿಗಳನ್ನು ಕೊಟ್ಟರೆ ಯೋಗ್ಯ ವೇಳೆಯಲ್ಲಿ ಉತಾರೆಗಳನ್ನು ತಯಾರಿಸಿಕೊಡುವುದಿಲ್ಲ. ವಿಚಾರಿಸಲಾಗಿ "ಹೊರಗೆ ನಡೆ, ಉತಾರೆ ಹಾಗೆಯೇ ಸಿಗುತ್ತದೇನು? ನನಗೆ ಮನಸ್ಸಿಗೆ ಬಂದಾಗ ತಯಾರಿಸಿ ಕೊಡುತ್ತೇನೆ" ಎಂದು ಮುಂತಾಗಿ ಬೆದರಿಸುತ್ತಾರೆ. ಹೀಗಾಗಿ ಬಡಜನರು ತಮ್ಮ ಅಡಚಣೆ ದೆಸೆಯಿಂದ ಯಾವುದಾದರೂ ವ್ಯವಹಾರ (ಸಾಲ, ಪತ್ರಿ ವಗೈರೆ) ಮಾಡಲು ಬಹಳ ಪೇಚಾಡುತ್ತಿದ್ದಾರೆ.

ಬಾಗಲಕೋಟೆಯು ಅರವತ್ತು-ಎಪ್ಪತ್ತು ಜನಸಂಖ್ಯೆಯುಳ್ಳ ಶಹರವಿದ್ದು ದಿನಾಲೂ ವೆಷ್ಟೋ ಜನರು ತಮ್ಮ ಆಸ್ತಿಯ ಉತಾರೆದಸಿಂದ ಅರ್ಜಿ ಕೊಡುತ್ತಾರೆ. ಆದರೆ ಸಿಟಿ ಸರ್ವೆ ಆಫೀಸರ ಈ ದುರ್ವರ್ತನೆಯಿಂದ, ಲಂಚಗೂಳಿತನದಿಂದ ಅವರು ಬೇಸತ್ತಿದ್ದಾರೆ. ಸಂಬಂಧಪಟ್ಟ ಮೇಲಾಧಿಕಾರಿಗಳು ಕೂಡಲೇ ಈ ಕುರಿತು ಚೌಕಾಶಿ ಮಾಡಬೇಕು.

"ಡೀಯುಮ್ಕ" ಬಾಗಲಕೋಟಿ

ದಾವಣಗೆರೆ ಸರ್ಕಾರಿ ಆಸ್ಪತ್ರೆಯ ದುಸ್ಥಿತಿ

ಇಲ್ಲಿಯ ಸರ್ಕಾರಿ ಆಸ್ಪತ್ರೆಯ ಆಡಳಿತ ಬರಬರುತ್ತಾ ಹದಗೆಡುತ್ತಿದೆ. ಹೇಳುವವರಿಲ್ಲ; ಕೇಳುವವರಿಲ್ಲ ಹಾಗಾಗಿದೆ ಇದರ ಆಡಳಿತ. ಇಲ್ಲಿ ಬಡರೋಗಿಗಳಿಗೆ ಸರಿಯಾದ ಚಿಕಿತ್ಸೆ ದೊರಕುತ್ತಿಲ್ಲ. ಇಲ್ಲಿಯ ಪ್ರತಿಯೊಬ್ಬ ಅಧಿಕಾರಿಗಳು, ನರ್ಸುಗಳು ಲಂಚದಾಟದಲ್ಲಿ ತಲ್ಲೀನರಾಗಿ, ಲಂಚ ಕೊಟ್ಟವರಿಗೆ ಸರಿಯಾದ ಚಿಕಿತ್ಸೆ ಮಾಡುವುದು, ಕೊಡಲು ನಿರಾಕರಣೆ ಮಾಡಿದವರಿಗೆ ಸರಿಯಾಗಿ ಮಾಡದಿರುವುದು ಕಂಡುಬರುತ್ತಿದೆ, ರಾತ್ರಿ ವೇಳೆಯಲ್ಲಂತೂ ರೋಗಿಗಳ ಗೋಳನ್ನು ಕೇಳುವವರೇ ಇಲ್ಲದಾಗಿದ್ದಾರೆ. ಡಾಕ್ಟರುಗಳ, ನರ್ಸುಗಳ ಪತ್ತೆಯೇ ಇರುವುದಿಲ್ಲ. ಆಸ್ಪತ್ರೆಗೆ ಮಾತ್ರ ಬಂದಿರುತ್ತಾರೆ.

ಆಸ್ಪತ್ರೆಯ ವರಾಂಡದಲ್ಲಿ ಕಾಲಿಡುತ್ತಲೆ ಲಂಚದಾಟ ಪ್ರಾರಂಭವಾದಂತೆ. ವಿಲ್ಲಿನ ಹುಡುಗರಿಗೆ ಸರ್ಟಿಫಿಕೇಟ್ ಮಾಡಲು ಎರಡೆರಡು ರೂಪಾಯಿಗಳನ್ನು ಬೇಡುತ್ತಾರೆ. ಅಲ್ಲದೆ ಕೆಳದರ್ಜೆಯ ಅಧಿಕಾರಿಗಳಂತೂ ರಾತ್ರಿ ವೇಳೆಯಲ್ಲಿ ಕುಡಿದು ಬಂದು ಆಸ್ಪತ್ರೆಯಲ್ಲೇ ಗಲಾಟೆ ಮಾಡುತ್ತಿರುತ್ತಾರೆ. ಇವರ ಹಾವಳಿಯಿಂದ ರಾತ್ರಿ ರೋಗಿಗಳಿಗೆ ನಿದ್ರೆಯೇ ಬರುವುದು ಅಸಾಧ್ಯವಾಗಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಲೇಡೀಸ್ ಸೆಕ್ಷನ್ನಿನಲ್ಲಿ ಅನಾನುಕೂಲತೆಗಳು ಹೆಚ್ಚಾಗಿ ಹೆಂಗಸರಿಗೆ ಬಹಳ ತೊಂದರೆಯಾಗುತ್ತಿದೆ. ಬಾಣಂತಿಯರಿಗಂತೂ ದೇವರೇ ಗತಿ. ಹೀಗಾಗಿದೆ ಇಲ್ಲಿಯ ಆಸ್ಪತ್ರೆಯಾಡಳಿತ. ಯಾರಿಗೆ ದೂರೋದು ಯಾರನ್ನು ಕೇಳೋದು ?

"ಗುರುಪ್ರಭಾ" ದಾವಣಗೆರೆ

ಪ್ರಾಂತೀಯ ಸುದ್ದಿ ಸಂಗ್ರಹ

ರಬಕವಿ ಬನಹಟ್ಟಿ ನಗರಸಭೆಯ ರಾದ್ಧಾಂತ

ನಗರಸಭೆಯ ಹೊಲಸು ತಿಳುವಾಗದ ಸ್ಥಿತಿಗೆ ಬಂದು ಮುಟ್ಟಿದೆ. ಜನರಲ್ ಎಲೆಕ್ಷನ್‌ದಿಂದ ಇಲ್ಲಿಯ ವರೆಗೆ ಸದಸ್ಯರು ಒಬ್ಬರ ಮೇಲೊಬ್ಬರು ಆರೋಪ ಪ್ರತ್ಯಾರೋಪ ಹೊರಿಸಿ, ಸದಸ್ಯತ್ವ ರದ್ದತಿ ಬಗ್ಗೆ ಸರಕಾರಕ್ಕೆ ಅರ್ಜಿ ಮಾಡುವುದು ಅರ್ಜಿ ಚವಕಾಶಿ—ಇದರಲ್ಲೇ ಇಡೀ ಆಡಳಿತ ಶಕ್ತಿ ಕುಂಠಿತವಾಗಿ ಜನತೆಯ ಬೇಡಿಕೆ ಅರ್ಜಿಗಳು ದಾದು ಆಗದೆ ಬೀಳುತ್ತಿವೆ.

ಇದೇ ವಾರದಲ್ಲಿ ಜಿಲ್ಲಾಧಿಕಾರಿಗಳು ಎರಡು ಸಲ ಬಂದು ಹೋಗಿ ರಬಕವಿ ಬನಹಟ್ಟಿಯ ಎಲ್ಲ ಸದಸ್ಯರಿಗೂ ಒಮ್ಮತದಿಂದ ಹೋಗಲಿಕ್ಕೆ ಒತ್ತಾಯಪಡಿಸಿ, ಸೂಪರ್ ಸೀಡ್ ಮಾಡುವ ಮುನ್ನೆಚ್ಚರಿಕೆ ಕೊಟ್ಟರೆಂದು ತಿಳಿದುಬಂದಿದೆ. ಹೀಗಾಗಿ ಆಡಳಿತೆಯಲ್ಲಿ ತೀವ್ರ ಅವ್ಯವಸ್ಥೆ ತಲೆದೋರಿರುವ ಕಾರಣ ನಾಗರೀಕರು ಬಲೇ ಬೇಜಾರು ಪಟ್ಟುಕೊಂಡಿದ್ದಾರೆ.

ಹೊಲದಲ್ಲಿ ದನ ಹಾದುದಕ್ಕಾಗಿ....

ಬೆಳಗಾವಿ ಜಿಲ್ಲೆಯ ಹುದಲಿಯಿಂದ ೨ ಮೈಲಿ ದೂರವಿರುವ ರಂಗಧೋಳಿ ಗ್ರಾಮದ ಜಮೀನುದಾರರೊಬ್ಬರ ಹೊಲದಲ್ಲಿ ದನಗಳು ಹಾದುಹೋದುದಕ್ಕಾಗಿ ಊರಿನ ಇಬ್ಬಣಗಳಲ್ಲಿ ಆಗಸ್ಟ್ ೭ರಂದು ಘರ್ಷಣೆಯಾಗಿ ಮೂರು ಮಂದಿ ಗಾಯಗೊಂಡರೆಂದೂ ಗಾಯಗೊಂಡವರನ್ನು ಬೆಳಗಾವಿಯ ಸಿವಿಲ್ ಹಾಸ್ಪಿಟಲಿಗೆ ಸಾಗಿಸಲಾಗಿದ್ದು ಅಬ್ಬರ ಸ್ಥಿತಿ ಚಿಂತಾಜನಕವಾಗಿದೆಯೆಂದು ವರದಿಯಾಗಿದೆ.

ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನ್

— ಕಾರ್ಯಕಾರಿ ಸಮಿತಿ ಸಭೆ —

ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನ್‌ನ ಕಾರ್ಯಕಾರಿ ಸಮಿತಿ ಸಭೆಯು ತಾ. 24—8—58ರಂದು ಸಂಘದ ಆಫೀಸಿನಲ್ಲಿ ಕಾ॥ ಎಸ್. ದಿನಕರ್ ರಾವ್ ಸಹೂರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೋಟಾರು ಕೈಗಾರಿಕೆಯಲ್ಲಿ ದುಡಿಯುವ ಕಾರ್ಮಿಕರಲ್ಲಿರುವ (ಹಾಲಿ ಇರುವ ಯೂನಿಯನ್ ಬಗ್ಗೆ) ಅತೃಪ್ತಿಯನ್ನು ಸಭೆಯು ಗಮನಿಸಿ ಮೋಟಾರ್ ಕೆಲಸಗಾರರನ್ನೂ ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನಿನ ನೇತೃತ್ವದಲ್ಲಿ ಸಂಘಟಿಸಬೇಕೆಂದು ತೀರ್ಮಾನವನ್ನು ಕೈಗೊಳ್ಳಲಾಯಿತು. ಅಂತೆಯೇ ಮೋಟಾರು ಕೆಲಸಗಾರರನ್ನು ಸಂಘಕ್ಕೆ ಸೇರಿಸಿ ಯೂನಿಯನ್ ತೀರ್ಮಾನಕ್ಕೆ ಸಹಕರಿಸಬೇಕೆಂದು ಬಿನ್ನವಿಸಲಾಯಿತು.

ಅಲ್ಲದೆ, ಲೇಬರ್ ಡಿಪಾರ್ಟ್‌ಮೆಂಟ್ ಮುಂದೆ ಇರುವ ವಿವಾದ (ಶ್ರೀ ಗುರುನಾಥ ಥಿಯೇಟರ್, ಎಚ್. ವಿ. ಆರ್. ಇಂಜಿನಿಯರಿಂಗ್ ವರ್ಕ್ಸ್ ಇತ್ಯಾದಿ)ಗಳನ್ನು ಕೂಡಲೇ ಸರಕಾರ ಕೈಗಾರಿಕಾ ಕೋರ್ಟಿಗೆ ಹಾಕಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

ಬೆಂಗಳೂರು-ದಾಸರಹಳ್ಳಿಯಲ್ಲಿ ಪಾರ್ಟಿ ಶಿಕ್ಷಣ ತರಗತಿ

ಕಮ್ಯೂನಿಸ್ಟ್ ಪಾರ್ಟಿಯ ಬೆಂಗಳೂರು ಜಿಲ್ಲಾ ಸಮಿತಿಯ ತೀರ್ಮಾನದಂತೆ

[ಆನೇ ಪುಟ ನೋಡಿ]

ಪುರಸಭೆಗಳು 'ಸಹಾಯ ಕೇಳಬಾರದೆನ್ನುವ ಸರಕಾರ ತಾನೆಷ್ಟು ಸರಿಯಾಗಿದೆ?

ಸಂಪಾದಕರಿಗೆ ಪತ್ರಗಳು

“ಪುರಸಭೆಗಳು ಸರ್ಕಾರದಿಂದ ನೆರವನ್ನು ನಿರೀಕ್ಷಿಸಕೂಡದು” ಎಂಬುದಾಗಿ ಸಚಿವ ಸುಬ್ರಹ್ಮಣ್ಯಂರವರು ನಂಜನಗೂಡಿನಲ್ಲಿ ಕಳೆದ ೨೫ನೇ ತಾರೀಖಿನಂದು ಮಾತನಾಡುತ್ತ ಪುರಸಭೆಗಳಿಗೆ ಉಪದೇಶಿಸಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಪುರಸಭೆಗಳು ಆರ್ಥಿಕ ನೆರವನ್ನು ಕೇಳುವುದು ಸ್ವಾಭಾವಿಕ. ಸಚಿವರ ಮಾತನ್ನೂ ನಾವು ಒಪ್ಪೋಣ. ಆದರೆ ಅವರ ಸರ್ಕಾರದ ನೀತಿಯ ಬಗ್ಗೆ ಏನು ಹೇಳೋಣ? ಪುರಸಭೆಗಳು ಆಕ್ಟ್ರಾಯ್ ವಗೈರೆ ತೆರಿಗೆಗಳನ್ನು ಹೆಚ್ಚಿಸಿ ಆ ಬಗ್ಗೆ ಡಿವಿಜನಲ್ ಕಮಿಷನರ್‌ರವರ ಒಪ್ಪಿಗೆಗೆ ಕಳುಹಿಸಿ ೨-೩ ವರುಷಗಳಾದರೂ ಯಾವ ಸುದ್ದಿಯಿಲ್ಲದಿದ್ದರೆ, ಪುರಸಭೆಗಳ ಈ ತೀರ್ಮಾನುಗಳನ್ನು 'ವೇಸ್ಟ್ ಬಾಕ್ಸ್' ನಲ್ಲಿಟ್ಟುಕೊಂಡರೆ ಈಗ ಪುರಸಭೆಗಳು ಏನು ಮಾಡಬೇಕು? ಮಾನ್ಯ ಸಚಿವರು ಇದಕ್ಕೇನು ಉತ್ತರ ಹೇಳುತ್ತಾರೆ? ಮಾನ್ಯ ಸಚಿವರು ಉಪದೇಶ ಮಾಡುವುದಕ್ಕಿಂತ ಕಾರ್ಯತಃ ಕೆಲಸಗಳನ್ನು ಮಾಡಿಸಿದ್ದರೆ ಎಷ್ಟು ಚೆನ್ನಾಗಿತ್ತು! ಪುರಸಭೆಯವರು ಸರಕಾರದಿಂದ ನೆರವನ್ನು ನಿರೀಕ್ಷಿಸುವುದೂ ಕಡಮೆಯಾಗುತ್ತದೆಯೆಂದು ನನ್ನ ನಂಬಿಕೆ.

ಎನ್. ಆರ್. ಕೆ. ಪ್ರಭು
ತೀರ್ಥಹಳ್ಳಿ

ಕೊಳ್ಳೇಗಾಲ ನೇಯ್ಗೆಯವರ ಸಹಕಾರ ಸಂಘ ದುಃಸ್ಥಿತಿಗೆ

“ಕೊಳ್ಳೇಗಾಲದ ನೇಯ್ಗೆಯವರ ಸಹಕಾರೀ ಉತ್ಪತ್ತಿ ಮತ್ತು ಮಾರಾಟ ಸಂಘ ಲಿ. ಮೈಸೂರು ಸಂಸ್ಥಾನದ 19 ಸೊಸೈಟಿಗಳಲ್ಲಿ ಅತ್ಯುತ್ತಮವಾದುದು. ಈ ಸೊಸೈಟಿಯಲ್ಲಿ ಯಾವ ನಷ್ಟವೂ ಆಗದೆ ಉತ್ಪತ್ತಿಯಾದ ಬಟ್ಟೆಯೆಲ್ಲ ಮಾರಾಟವಾಗಿ ಲಾಭವಾಗುತ್ತಿದೆ” ಎಂಬುದಾಗಿ ಸ್ಟೇಟ್ ಸೊಸೈಟಿಯ ಜಂಟೀ ಕಾರ್ಯದರ್ಶಿಗಳಾಗಿದ್ದ ಶ್ರೀರಾಮಮೂರ್ತಿಯವರು ಇಲ್ಲಿಗೆ ಬಂದಾಗ್ಗೆ ಹೇಳಿದ್ದರು.

ಆದರೆ ಈಗ ಅವರು ಇಲ್ಲಿಗೆ ಮತ್ತೆ ಬಂದರೆ ಏನು ಹೇಳಿಯಾರೋ!

ಆದರೆ ಇತ್ತೀಚೆಗೆ ಚುನಾವಣೆಗಳಾದ ಬಳಿಕ ಸೊಸೈಟಿಯ ಕೆಲಸ ಕಾರ್ಯಗಳು ಉಪೇಕ್ಷಿಸಲ್ಪಟ್ಟಿವೆ. 49 ಮಗ್ಗಗಳು ಈಗ ಒಂದು ತಿಂಗಳಿಂದ ನಿಶ್ಚೇಷ್ಟಿಕವಾಗಿವೆ. 49 ಜನ ನೇಯ್ಗೆಯವರು ನಿರುದ್ಯೋಗಿಗಳಾಗಿದ್ದಾರೆ.

ಇತ್ತೀಚೆಗೆ ಬೈಲಾಗಳಿಗೆ ವಿರೋಧವಾಗಿ ಸೊಸೈಟಿಯು ಮಾಸ್ಟರ್ ವೀವರ್ಸ್ ಒಬ್ಬರನ್ನು ಸೊಸೈಟಿಯ ಸದಸ್ಯರನ್ನಾಗಿ ತೆಗೆದುಕೊಂಡು ಅವರನ್ನು ಡೈರೆಕ್ಟರೆಂದು ಚುನಾಯಿಸಿದುದರಿಂದಲೂ ಮತ್ತು ನೇಯ್ಗೆ ಕೆಲಸಕ್ಕೆ ಸಂಬಂಧಿಸಿದ ಹಾಗೂ ಕೆಲಸಗಾರರ ಸ್ಥಿತಿಗತಿಗಳನ್ನರಿಯದ ಸಾಹುಕಾರರೊಬ್ಬರನ್ನು ಅಧ್ಯಕ್ಷರೆಂದು ಆರಿಸಿದುದರಿಂದಲೂ ಸೊಸೈಟಿಯ ಕೆಲಸ ಕಾರ್ಯಗಳು ಹದಗೆಟ್ಟು ಕೆಲಸಗಾರರಿಗೆ ಭೀತಿಯುಂಟಾಗಿದೆ. ಈ ನಡವಳಿಕೆಗಳನ್ನು ಸಂಬಂಧಿಸಿದ ಇಲಾಖೆಯ ಗಮನಕ್ಕೆ ತಂದಿದ್ದಾಗ್ಯೂ ಅವರು ಉಪೇಕ್ಷಿಸಿಬಿಟ್ಟಿದ್ದಾರೆ. ಹೀಗಾಗಿ ಸೊಸೈಟಿಗೂ, ಷೇರುದಾರರಿಗೂ ನಷ್ಟವಾಗುತ್ತಿದೆ.

ಆದ್ದರಿಂದ ಈಗಲಾದರೂ ಸೊಸೈಟಿಯ ಡೈರೆಕ್ಟರುಗಳು, ಕೋ-ಆಪರೇಟಿವ್ ಶಾಖೆಯ ಅಧಿಕಾರಿಗಳು ಸೊಸೈಟಿಯ ಅಕ್ರಮಗಳನ್ನು ಸರಿಪಡಿಸಿ ಸೊಸೈಟಿಯು ಹಿಂದಿನಂತೆಯೇ ಲಾಭದಾಯಕವಾಗಿ ಕೆಲಸ ಮಾಡುವಂತೆ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಮಾದಯ್ಯ, ಕೃಷ್ಣಯ್ಯ ಮತ್ತು ಟಿ.ವಿ ವೆಂಕಟಾಚಲಯ್ಯ ಹಾಗೂ ವೆಂಕಟರಮಣಯ್ಯ
ಕೊಳ್ಳೇಗಾಲ.

ಇನ್ನೂ ದೇವಸ್ಥಾನವೇ ಗತಿ!

ಗುಬ್ಬೀ ತಾಲ್ಲೋಕು ಗುಡ್ಡೆನಹಳ್ಳಿ ಗ್ರಾಮದಲ್ಲಿ ಹತ್ತು ವರ್ಷಗಳಿಂದ ಪಾಠಶಾಲೆ ದೇವಸ್ಥಾನದಲ್ಲೇ ಇದ್ದು ಗಾಳಿ ಬೆಳಕು ಸಾಲದೆ ಹುಡುಗರಿಗೆ ತೊಂದರೆಯಾಗಿದೆ. ಗ್ರಾಮಸ್ಥರು ತಮ್ಮ ಭಾಗದ ಹೆಂಚು, ಕಬ್ಬಿಣ ಮ ಗಾರೆಯ ರೂಪದಲ್ಲಿ ಸಹಾಯವನ್ನು ನೀಡಿ ಮೂರು ವರುಷಗಳಾದರೂ, ಕಟ್ಟಡ ಕಟ್ಟಿಸಿ ಕೊಡಬೇಕೆಂದು ಸರ್ಕಾರಕ್ಕೆ ಎಷ್ಟು ಅರ್ಜಿಗಳನ್ನು ಗುಜರಾಯಿಸಿದರೂ ಕೇಳುವವರಿಲ್ಲವಾಗಿದೆ ಈಗಿನ ಗ್ರಾಂಟ್ ಸ್ಕೇಲನ್ನು ಹೆಚ್ಚಿಸಿ, ಪಕ್ಕಾ ಪ್ರೈಮರಿ ಸ್ಕೂಲಾಗಿ ಈ ಶಾಲೆಯನ್ನು ಪರಿವರ್ತಿಸಿ, ಕಟ್ಟಡವನ್ನು ಬೇಗನೇ ಕಟ್ಟಿಸಿ ಕೊಡುವರೆಂದು ಆಶಿಸುತ್ತೇನೆ.

ಹೆಚ್. ಕರಿಯಪ್ಪ
ಗುಡ್ಡೇನಹಳ್ಳಿ,

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಮುಷ್ಕರ ನಿರ್ಧಾರ

ಈ ಹಿಂದೆ ಜುಲೈ 17ರಿಂದ ಕೂಲಿಕಾರರು ಮುಷ್ಕರ ಪ್ರಾರಂಭಿಸಬೇಕೆಂದು ತೀರ್ಮಾನಿಸಿದ್ದರೂ ಸಹ ಸಂಘವು ಮತ್ತೊಂದು ಸಲ ಸರ್ಕಾರದ ಅಧಿಕಾರಿಗಳ ಹತ್ತಿರವೂ ಮತ್ತು ಕಂಪೆನಿಯ ಅಧ್ಯಕ್ಷರಾದ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಕಾರ್ಮಿಕ ಮಂತ್ರಿಗಳ ಹತ್ತಿರವೂ ಸಂಧಾನ ನಡೆಸಿ ಶಾಂತಿಯುತ ಒಪ್ಪಂದಕ್ಕೆ ಬರಬೇಕೆಂದು ಬಹಳವಾಗಿ ಶ್ರಮಿಸಿತು. ಆದರೆ ಮ್ಯಾನೇಜಿಂಗ್ ಏಜೆಂಟರಾದ ಜಾನ್ ಟೇಲರ್ ಕಂಪೆನಿಯ ಹಟಮಾರಿತನದಿಂದಲೂ ಮತ್ತು ಮಂತ್ರಿಗಳ ಉದಾಸೀನ ಮನೋಭಾವದಿಂದಲೂ ಯಾವ ಪ್ರಯೋಜನವೂ ಆಗಲಿಲ್ಲ. ಆದ್ದರಿಂದ ಇದೇ ತಿಂಗಳು ಸೆಪ್ಟೆಂಬರ್ 8ನೇ ತಾರೀಖಿನಿಂದ ಮುಷ್ಕರ ಆರಂಭಿಸಲು 1000 ಜನ ಕೂಲಿಕಾರರೆಲ್ಲಾ ಏಕಮತದಿಂದ ತೀರ್ಮಾನ ಮಾಡಿದ್ದಾರೆ. ಈಗಲಾದರೂ ಮ್ಯಾನೇಜ್‌ಮೆಂಟಿನವರೂ ಮತ್ತು ಕಂಪೆನಿ ಅಧ್ಯಕ್ಷರಾದ ಮಾನ್ಯ ಮುಖ್ಯ ಮಂತ್ರಿ (ಬಿ. ಡಿ. ಜತ್ತಿ)ಯವರೂ ಎಚ್ಚತ್ತು ಕೂಲಿಕಾರರ ಕೇಳಿಕೆಗಳನ್ನು ಈಡೇರಿಸಲೆಂದು ಸಂಘವು ಆಶಿಸುತ್ತದೆ. ಸಂಘದ ಮಾನ್ಯತೆ, ಹೆಚ್ಚಿನ ತುಟ್ಟಿ ಭತ್ಯ, ಗ್ರ್ಯಾಚುಟಿ ಮತ್ತು ಕೆಲಸದಿಂದ ತೆಗೆದುಹಾಕಲ್ಪಟ್ಟ 12 ಜನರನ್ನು ಕೆಲಸಕ್ಕೆ ವಾಪಾಸು ತೆಗೆದುಕೊಳ್ಳುವುದು—ಇವು ಮುಖ್ಯ ಬೇಡಿಕೆಗಳಾಗಿವೆ.

ದ. ಕ. ಜಿಲ್ಲೆಯಲ್ಲಿ 14 ಸಾವಿರಕ್ಕೂ ಹೆಚ್ಚು ಸದಸ್ಯತ್ವದ 18 ಯೂನಿಯನ್‌ಗಳ ಕಾರ್ಮಿಕರ ಮಹಾ ಸಂಘಟನೆ

ಎಲ್ಲಾ ಕೈಗಾರಿಕೆಗಳ ಮಜೂರರಿಗೂ ಕನಿಷ್ಟ ಕೂಲಿ ನಿರ್ಣಯಿಸಲು ದ. ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಒತ್ತಾಯ

ದ. ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಪ್ರಥಮ ಸಭೆಯು ತಾರೀಖು 31—8—58 ರಂದು ಮಂಗಳೂರಲ್ಲಿ ಶ್ರೀ ಎ. ಶಾಂತರಾಂ ಪೈಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಳೆದ ಮಾರ್ಚಿ ತಿಂಗಳಲ್ಲಿ ಜರಗಿದ 6ನೇ ಜಿಲ್ಲಾ ಮಜೂರರ ಸಮ್ಮೇಳನದ ನಂತರದ 5 ತಿಂಗಳಲ್ಲಿ ಕೌನ್ಸಿಲ್ ನಡೆಸಿದ ಚಟುವಟಿಕೆಗಳ ವರದಿಯನ್ನು ಕಾರ್ಯದರ್ಶಿಗಳಾದ ಶ್ರೀ ಕೆ. ಮೋನಪ್ಪಶೆಟ್ಟರು ಸಭೆಯ ಮುಂದಿಟ್ಟರು. 1958ನೇ ಮಾರ್ಚಿ ತಿಂಗಳಾಂತ್ಯಕ್ಕೆ ಜಿಲ್ಲೆಯಲ್ಲಿ ಕೌನ್ಸಿಲಿಗೆ ಸೇರಿರುವ 18 ಯೂನಿಯನ್‌ಗಳಲ್ಲಿ 14351 ಸದಸ್ಯರಿರುವರು. ಇವರಲ್ಲಿ ಇಡೀ ವರ್ಷ ಚಂದಾ ಕೊಟ್ಟವರು 10973 ಈ ಎಲ್ಲಾ ಯೂನಿಯನ್‌ಗಳೂ ಎ. ಐ ಟಿ. ಯು. ಸಿ. ಗೆ ಸೇರಿವೆ ಎಂಬುದಾಗಿ ವರದಿಯಲ್ಲಿ ಹೇಳಿದೆ.

ಪ್ರತಿಯೊಂದು ಯೂನಿಯನ್ ಪ್ರತಿನಿಧಿಗಳೂ ಅವರವರ ಯೂನಿಯನ್ನಿನ ಚಟುವಟಿಕೆಗಳ ವರದಿ ಕೊಟ್ಟ ಬಳಿಕ 1958-59ನೇ ವರ್ಷದಲ್ಲಿ ಜಿಲ್ಲೆಯಲ್ಲಿ ಈಗ ಇರುವ ಟಿ ಯು. ಸದಸ್ಯರ ಸಂಖ್ಯೆಯನ್ನು 20,000 ಕ್ಕೆ ಹೆಚ್ಚಿಸಬೇಕೆಂಬ 6ನೇ ದ. ಕ. ಜಿಲ್ಲಾ ಮಜೂರ ಸಮ್ಮೇಳನದ ನಿರ್ಣಯಗಳನ್ನು ಜಾರಿಗೊಳಿಸಲು ಎಲ್ಲಾ ಯೂನಿಯನ್‌ಗಳೂ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂಬ ದ. ಕ. ಜಿಲ್ಲಾ ಮೋಟಾರು ಮತ್ತು ಇಂಜಿನಿಯರಿಂಗ್ ಮಜೂರರ ಮತ್ತು ಟಿಂಬರ್ ಎಂಡ್ ಸಾಮಿಲ್ ಮಜೂರರ ಸಮ್ಮೇಳನ ಕರೆಯಬೇಕೆಂಬ “ಲೆಬರ್” ಕಾನೂನನ್ನು ಸರಕಾರದಿಂದ ಜ್ಯಾರಿಗೊಳಿಸುವ ಹೋರಾಟಕ್ಕೆ ಸಿದ್ಧತೆ ನಡೆಸಲು ಗೇರುಬೀಜ ಮಜೂರರ ಸಮ್ಮೇಳನ ಕರೆಯಬೇಕೆಂಬ ಜಿಲ್ಲೆಯ ಬೀಡಿ ಮಜೂರರಿಗೆ ಕನಿಷ್ಠ ಕೂಲಿ ನಿರ್ಣಯಿಸಲಿಕ್ಕಿರುವ ಮತ್ತು ಕಾನೂನು ರಚಿಸಲಿಕ್ಕಿರುವ ಅವರ ಇಂದಿನ ಚಳುವಳಿಯನ್ನು ಮುನ್ನಡೆಸಿ ಬೆಂಗಳೂರಿಗೆ ಪಾದಯಾತ್ರೆ ಜಾಥಾ ಕೊಂಡೊಯ್ಯಲು ಸಿದ್ಧತೆ ನಡೆಸಬೇಕೆಂಬ, ಒಕ್ಟೋಬರ 31ರಂದು ಎ. ಐ. ಟಿ ಯು. ಸಿ. ದಿನ ಆಚರಿಸಿ ಕೆ. ಪಿ. ಟಿ. ಯು. ಸಿ ಗೆ ಸಹಾಯ ಸಂಗ್ರಹಿಸಬೇಕೆಂಬ, ನವಂಬರ ತಿಂಗಳೊಳಗೆ 1958-59ನೇ ವರ್ಷದ ಎಫಿಲಿಯೇಶನ್ ಫೀಸನ್ನು ಎಲ್ಲಾ ಯೂನಿಯನ್‌ಗಳೂ ಕಳುಹಿಸಿ ಕೊಡಬೇಕೆಂಬ ತೀರ್ಮಾನಗಳನ್ನು ಸಭೆಯಲ್ಲಿ ಅಂಗೀಕರಿಸಲಾಯಿತು.

ಅಲ್ಲದೆ ಯಸ್. ಕೆ. ಟಿ. ಯು. ಸಿ. ಯ ಮುಖಪತ್ರ “ಟ್ರೇಡ್ ಯೂನಿಯನ್” ಪತ್ರಿಕೆಯನ್ನು ನಡೆಸಲು ಶ್ರೀ ಎ. ಶಾಂತಾರಾಂಪೈ, ಎಚ್. ಉಮಾನಾಥಸ್ಯಾಕ್ ಮತ್ತು ಶ್ರೀ ಕೆ. ಮೋನಪ್ಪಶೆಟ್ಟಿ ಈ ಮೂವರಿರುವ ಸಂಪಾದಕೀಯ ಮಂಡಲಿಯೊಂದನ್ನು ಚುನಾಯಿಸಲಾಯಿತು.

ಮೈಸೂರು ಸರಕಾರದ ಮಜೂರ ವಿರೋಧಿ ನೀತಿಯನ್ನು ಸಭೆಯಲ್ಲಿ ಬಲವಾಗಿ ಖಂಡಿಸಿ ಸರಕಾರವು ತನ್ನ ಈ ನೀತಿಯನ್ನು ಬದಲಾಯಿಸುವಂತೆ ಮಾಡಲು ಯೋಗ್ಯ ಚಳವಳಿ ನಡೆಸಬೇಕೆಂದೂ ಕರೆ ಕೊಡಲಾಯಿತು.

ಪಾರ್ಟಿ ಶಿಕ್ಷಣ ತರಗತಿ

(೭ನೇ ಪುಟದಿಂದ)

ಪಾರ್ಟಿ ಶಿಕ್ಷಣ ತರಗತಿಯು ಆಗಸ್ಟ್ 23 ಮತ್ತು 24ನೇ ತಾರೀಕುಗಳಲ್ಲಿ ದಾಸರಹಳ್ಳಿಯಲ್ಲಿ ನಡೆಯಿತು. ಪಾರ್ಟಿಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರಾದ ಕಾ॥ ಬಿ. ವಿ. ಕಕ್ಕಿಲ್ಲಾಯರವರು ತರಗತಿಯನ್ನು ನಡೆಸಿದರು. ಸುಮಾರು 25 ಜನ ಕಾಮ್ರೇಡರುಗಳು ಭಾಗವಹಿಸಿದ್ದರು ಚರಿತ್ರಾರ್ಹವಾದ ಅಮೃತ್‌ಸರ್ ಪಾರ್ಟಿ ಅಧಿವೇಶನದ ತೀರ್ಮಾನಗಳನ್ನು ಕಾರ್ಯಗತ ಮಾಡಲು ಪಾರ್ಟಿಯನ್ನು ಬಲಪಡಿಸಬೇಕೆಂದೂ ಅವರು ಹೇಳಿದರು.

ಜಿಲ್ಲಾ ಸಮಿತಿಯು, ಪಾರ್ಟಿ ಶಿಕ್ಷಣ ತರಗತಿಗಳನ್ನು ಸೆಪ್ಟಂಬರ್ ತಿಂಗಳಲ್ಲಿ ಕನ್ನಡ, ತಮಿಳು ಮತ್ತು ಮಲಯಾಳಂನಲ್ಲಿ ನಡೆಸಬೇಕೆಂದು ತೀರ್ಮಾನಿಸಿದೆ.

'ಜನಶಕ್ತಿ'
ಕಾಶೀ ವಿಶ್ವೇಶ್ವರ ಗುಡಿ ಬೀದಿ,
ಬೆಂಗಳೂರು ೨
ಪ್ರಗತಿಶೀಲ ಕನ್ನಡ ವಾರಪತ್ರಿಕೆಗೆ
ಇಂದೇ ಚಂದಾದಾರರಾಗಿರಿ
ಚಂದಾ ವಿವರ:
ವಾರ್ಷಿಕ ಚಂದಾ ರೂ. 6—00
ಅರ್ಧ ವಾರ್ಷಿಕ ರೂ. 3—00
ಬಿಡಿ ಪ್ರತಿ 13 ನಯಾಪೈಸಾ

ಹುರಿಗಾಳು

(೪ನೇ ಪುಟದಿಂದ)

ಸೇನಾ ಸ್ಥಾಪನೆಗೆ ಆಶ್ವಾಸನೆಯಿತ್ತ ಬಳಿಕವೇ ಉಪವಾಸ ನಿಲ್ಲಿಸಿದರು.

—ಅಂದ ಮೇಲೆ ವಡಕ್ಕನ್ನರೇ ಹೇಗೆ ಕಾರಣರಾದಾರು ?

o o o

"ವಡಕ್ಕನ್ ಅಂದ್ರೆ ಏನು ಸ್ವಾಮಿ? ವಡಕನ್ನುಂಟುಮಾಡುವವರೇ ?" ಎಂದು ಈ ಶಬ್ದಾಪರಿಚಿತ ಕನ್ನಡ ಭಾಷೆಯೊಂದನ್ನೇ ಬಲ್ಲ ಕನ್ನಡ ವಾಚಕರ ಪ್ರಶ್ನೆ.

"ಹಿಂದೆ ಬ್ರದರ್ ವಡಕ್ಕನ್ ಎಂದು ಕರೆಸಿಕೊಳ್ಳುತ್ತಿದ್ದವರೇ ಈಗಿನ ಫಾದರ್ ವಡಕ್ಕನ್ ತಾನೆ?" ಎಂದು ಇನ್ನೊಬ್ಬರ ಸಂದೇಹ.

—ಹ್ಞೂ, ಹೌದು ಸ್ವಾಮಿ. ಇವರು ಬ್ರದರ್ ಎಂದು ಕರೆಸಿಕೊಳ್ಳುತ್ತಿದ್ದಾಗ ಈಗಿನಷ್ಟೇನು ದೊಡ್ಡವರಾಗಿದ್ದಿಲ್ಲ ಈಗ 'ಫಾದರ್' ಎಂದು ಕರೆಸಿಕೊಳ್ಳಲಾರಂಭಿಸಿದ ಬಳಿಕ ಕೇರಳ ಮನೆಯ ಫಾದರ್ ತಾನೇ ಎಂದು ಭಾವಿಸಿ ಕೊಂಡಂತೆ ಬಿಹೇವ್ ಮಾಡುತ್ತಿದ್ದಾರಲ್ಲ? ಏನಿದು? ಎಂದು ನನ್ನ ಕ್ರಿಶ್ಚಿಯನ್ ಸೋದರರೊಬ್ಬರ ಮರುಪ್ರಶ್ನೆ.

—ಕೇರಳ ಮನೆಯೆಂದು ಕರೆಯುವದಾದರೆ ಇವರನ್ನು ಮನೆಯೊಡಕನೆಂದು ಕರೆಯಲು ನಮ್ಮ ಅಭ್ಯಂತರವೇನಿಲ್ಲ.

o o o

ಕೇರಳದಲ್ಲಿ ಇದೀಗ ಸಂಚರಿಸುತ್ತಿರುವ ಕೇಂದ್ರ ರಕ್ಷಣಾಸಚಿವ ಶ್ರೀ ವಿ.ಕೆ ಕೆ. ಮೆನೋನ್‌ರು "ನಮ್ಮ ರಾಷ್ಟ್ರ ಜಾತ್ಯಾತೀತ ರಾಷ್ಟ್ರವೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಇಲ್ಲಿ ಅಲ್ಪ ಸಂಖ್ಯಾತರು ಇತರ ಪ್ರಜೆಗಳಿಗೆ ಸರಿಸಮನಾದ ಸ್ಥಾನಮಾನ ಹೊಂದಿದ್ದಾರೆಂದು ಹೆಮ್ಮೆಯಿಂದ ಹೇಳಬಹುದು"........... "ವಿದ್ಯಾರ್ಥಿ ಸಂಘಗಳು ಸ್ವಶಕ್ತಿಯಿಂದ ಬೆಳೆಯಬೇಕೆ ವಿನಃ ಅಧ್ಯಾಪಕ ವರ್ಗದ ಸಹಾಯದಿಂದಲ್ಲ. ಅವರು ಒಗ್ಗಟ್ಟಿನಿಂದ ನಡೆದು ಕೊಳ್ಳುವುದೇ ಅಲ್ಲದೆ ತಮ್ಮ ತಮ್ಮ ವ್ಯವಹಾರಗಳ ಮೇಲ್ವಿಚಾರಣೆಯನ್ನು ತಾವೇ ನಡೆಸಿಕೊಳ್ಳಬೇಕು" ಎಂಬುದಾಗಿ ಕಲ್ಲಿಕೋಟೆಯ ಹತ್ತಿರವಿರುವ ಫರೂಕ್ ಕಾಲೇಜು ಸಂಘವನ್ನು ಉದ್ಘಾಟಿಸುತ್ತ ಹೇಳಿದರಂತೆ.

"ಇದೇನು ವಿದ್ಯಾರ್ಥಿಗಳ ಸಭೆಯಲ್ಲಿ ನಮಗೆ ಬೋಧಿಸೋದೆ"? ಎಂಬುದಾಗಿ ಶಾಲಾ ಕಾಲೇಜುಗಳ ಖಾಸಗೀ ವ್ಯವಸ್ಥಾಪಕ ವರ್ಗವೂ, ಕೇರಳ ಕಾಂಗ್ರೆಸ್ ನಾಯಕ ಗಣವೂ ತಮ್ಮ ತಮ್ಮಲ್ಲೇ ಗುನುಗುಟ್ಟಿಕೊಂಡರಂತೆ.

o o o

ಸಿದ್ಧಾರ್ಥರೇಯವರ ವಿರುದ್ಧ ಪ್ರಚಾರ ಮಾಡುವ ಕಾಲಕ್ಕೆ ಬಂಗಾಲದ ಉಪಸಚಿವೆ ಶ್ರೀಮತಿ ಮಾಯಾಬ್ಯಾನರ್ಜಿ ಅವರು ದೇಶಬಂಧು ಚಿತ್ತರಂಜನದಾಸ್ (ಶ್ರೀ ರೇಯವರು ಚಿತ್ತರಂಜನದಾಸರ ಮೊಮ್ಮಗ) ರ ಮನೆತನ ಬಂಗಾಲಕ್ಕೇನೂ ಸೇವೆಸಲ್ಲಿಸಿಲ್ಲವೆಂದೂ ಅವರಿಗೆ ಮತಕೊಡಬೇಡಿರೆಂದು ಹೇಳಿದರಂತೆ.

—ಆದರೆ ಆ ಸಭೆಯಿಂದ ಹಲವೇ ಗಜಗಳ ದೂರದಲ್ಲಿದ್ದ ದಿವಂಗತ ದೇಶಬಂಧುಗಳು ದಾನವಿತ್ತ ಅರಮನೆಯಂಥ ಭವನ ಹೆರಿಗೆಯಾಸ್ಪತ್ರೆಯಾಗಿ ಜನಸೇವೆಯಲ್ಲಿ ನಿರತವಾದುದು ಅಚಲವಾಗಿ ನಿಂತುದು ತನ್ನಷ್ಟಕ್ಕೆ ತಾನೆ ಇವರ ಕೃತಘ್ನತೆಯನ್ನು ಕಂಡು ಮೌನವಾಗಿ ನಕ್ಕಿತಂತೆ!

o o o

ಪ್ರಧಾನಿ ನೆಹ್ರೂರವರ ಪತ್ರಿಕಾ ಗೋಷ್ಠಿಯಲ್ಲಿ ಅನೇಕ ಪ್ರಶ್ನೆಗಳು ಕೇಳಲ್ಪಡುತ್ತಿದ್ದುವಂತೆ. ಬನಾರಸದ ಹಿಂದೂ ವಿಶ್ವವಿದ್ಯಾನಿಲಯದ ಬಗ್ಗೆ ಪ್ರಶ್ನೆಗಳ ಸುರಿಮಳೆ ನಡೆದಾಗ 'ಹಿಂದೂ' ಪತ್ರಿಕೆಯ ದೆಹಲಿಯ ಪ್ರತಿನಿಧಿ ತುಂಬ ವಿಚಾರದಿಂದ "ಹಿಂದೂ ಮತ್ತು ಮುಸ್ಲಿಮ್ ಎಂಬ ಹೆಸರುಗಳನ್ನು ವಿಶ್ವವಿದ್ಯಾನಿಲಯಗಳಿಂದ ಹೊಡೆದುಹಾಕುವುದಕ್ಕೆ ಇದು ಸಕಾಲವಲ್ಲವೇ?" ಎಂದು ಕೇಳಿದರಂತೆ. ಈ ಸಲಹೆಯನ್ನು ತಕ್ಷಣವೆ ಒಪ್ಪಿಕೊಂಡ ಪ್ರಧಾನಿ " 'ಹಿಂದೂ' ಎಂದು ಇರುವ ಪತ್ರಿಕೆಯ ಹೆಸರನ್ನು ಕೂಡ ಯಾಕೆ ಹೊಡೆದು ಹಾಕಬಾರದು?" ಎಂದು ಹೇಳಿದರಂತೆ.

"ಚೌಚೌವಾಲಾ"

ಜನಯುಗ

ಕನ್ನಡ ಮಾಸಪತ್ರಿಕೆ
ಸೆಪ್ಟಂಬರ್ ೧೯೫೮

ಎರಡು ಕತೆಗಳು, ಮೂರು ಕವನಗಳು,
ಏಳು ಲೇಖನಗಳು, ಪುಸ್ತಕ ವಿಮರ್ಶೆ,
ನಮ್ಮ ನೋಟ ಇತ್ಯಾದಿಗಳು

ವರ್ಣರಂಜಿತ ಮುಖಪತ್ರ

ಪುಟಗಳು: 40 ★ ಬೆಲೆ: 25 ನ. ಪೈ.

ನಿಮ್ಮ ಪ್ರತಿಗಳಿಗೆ ಬರೆಯಿರಿ

ಜನಯುಗ ಕಾರ್ಯಾಲಯ,
L-59, ಕಾಶೀ ವಿಶ್ವೇಶ್ವರ ಗುಡಿ ರಸ್ತೆ,
ಸುಲ್ತಾನ್‌ಪೇಟೆ, ಬೆಂಗಳೂರು ೨

ದೊಡ್ಡಬಳ್ಳಾಪುರದಲ್ಲಿ

"ಮಕ್ಮಲ್ ಟೋಪಿ"

ಹಿರಣ್ಣಯ್ಯನವರ ಮಿತ್ರಮಂಡಲಿಯ ಕಲಾವಿದರು ದೊಡ್ಡಬಳ್ಳಾಪುರದಲ್ಲಿ ತಮ್ಮ ನಾಟಕ ಪ್ರದರ್ಶನ ನಡೆಸುತ್ತಿದ್ದಾರೆ. ಜನಪ್ರಿಯವಾಗುತ್ತಿರುವ ಈ ನಾಟಕಗಳು ಸಮಾಜದ ಲೋಪ ದೋಷಗಳನ್ನು ಎತ್ತಿತೋರಿಸುವುದಲ್ಲದೆ, ಶೋಷಣೆಗೊಳಗಾದ ದುಡಿಯುವ ವರ್ಗ ಎಚ್ಚೆತ್ತಾಗ ಹಾದಿ ತಪ್ಪಿದರೆ ಸಮಾಜದಲ್ಲಿರುವ ಬಂಡವಾಳಶಾಹಿಯ ಮೇಲೆ ಹೇಗೆ ಪರಿಣಾಮಗಳುಂಟಾಗುವುವೆಂಬುದನ್ನು ಮಕ್ಮಲ್ ಟೋಪಿಯಲ್ಲಿ ಕಾಣಬಹುದು. ಧನಿಕರಾದವರು ತಮ್ಮ ಹಣದ ಅಹಂಕಾರದಲ್ಲಿ ಮಾಡಬಾರದ ಅನ್ಯಾಯಗಳನ್ನು ಮಾಡುವುದು, ಬಡವರನ್ನು ಧಿಕ್ಕರಿಸುವುದು, ದಬ್ಬಾಳಿಕೆ ನಡೆಸುವುದು, ಸಮಾಜದ ಸ್ವತ್ತನ್ನು ಮತ್ತಷ್ಟು ಲೂಟಿ ಮಾಡುವುದು ಇತ್ಯಾದಿ ಕೃತ್ಯಗಳನ್ನೆಸಗುವುದು. ಇದದರಿಂದ ನೊಂದ ಬುದ್ಧಿಜೀವಿಯೋರ್ವನು ದುಃಖದ ಪ್ರಪಾತದಲ್ಲಿ ಸಿಲುಕಿದಾಗ ಅನ್ನಕ್ಕೆ ಅಲೆಯುವನು. ಆದರೆ ಸಾಹುಕಾರನ ಮನೆಯಲ್ಲಿ ಉದ್ಯೋಗ ಕೇಳಲು ಹೋದಾಗ ಮನೆಯ ಒಳಗಡೆಯಿಂದ ಎಂಜಲು ಕಾಫಿಯು ಎರಚಲ್ಪಡುವುದು. ಹಸಿವಿನ ಬೇನೆಯಲ್ಲಿ ನೊಂದಿರುವ ಭಿಕ್ಷುಕರಲ್ಲಿರುವ ಕರುಣೆ ಈಕೆಯಲ್ಲಿ ಕಾಣಬರುವುದಿಲ್ಲ. ಈ ನೊಂದ ಜೀವಿಗೆ ಸಹಾಯಕನಾಗಿ ಗೋವಿಂದ್ ಎಂಬ ಮಿತ್ರನು ದೊರೆಯುವನು. ಇವನ ಸಹಾಯದಿಂದ ತಿರುಕನು ಬ್ಯಾಂಕ್ ಒಂದನ್ನು ತೆರೆದು ಸುಲಿಗೆ ಮಾಡಿದ್ದ ಹಣವಂತರ ದುಡ್ಡನ್ನು ಕಸಿದು ಧರ್ಮ ಸಂಸ್ಥೆಗಳಿಗೆ ಸಹಾಯ ಮಾಡಿ "ಧರ್ಮ ರತ್ನಾಕರ"ನಾಗುವನು. ಕಾಫಿ ಬೀಜದ ಚೌರ್ಯದಲ್ಲಿ ಸಾಹುಕಾರಳಾಗಿದ್ದ ತಾಯಮ್ಮ, ರೈತರ ರಕ್ತವನ್ನು ಹೀರಿ ಬೆಳೆದಿದ್ದ ಜಮೀನ್ದಾರ, ಕುದುರೆಗೆ, ಜಟಕಾ ಹೊಡೆಯುವವರಿಗೆ, ಹೊಟ್ಟೆಗೆ ನೀಡದ ಮಾಲೀಕ, ತಕ್ಕಡಿ ಏರುಪೇರು ಮಾಡಿ ಬದುಕಿದ್ದ ಶೆಟ್ಟಿ—ಇವರೆಲ್ಲ ಭೂಪಾಲರಾಯನ "ಪ್ಲಾನಿಗೆ" ಬಲಿಯಾಗುವರು. ಹೀಗೆ ಈ ಭೂಪಾಲರಾಯನ ಪಾತ್ರ ಬೆಳೆಸಿ ಸಮಾಜವರ್ಗದ ಏರುಪೇರುಗಳ ಅಧಃಪತನ ಕಾಣಿಸಿರುವ ಜನತಾ ಕಲಾವಿದ ದಿವಂಗತ ಹಿರಣ್ಣಯ್ಯನವರು ಧನ್ಯರು. ಜನತೆ ಅವರತ್ತ ಪ್ರದರ್ಶನಗಳನ್ನು ಕಂಡು ಅವರ ಸರಳ ಸಹಜಾಭಿನಯಕ್ಕೆ ತಲೆದೂಗಿದ್ದಾರೆ. ಮತ್ತೆ ಅವರ ಕಾಲಾನಂತರ ಅವರ ಪುತ್ರ ಮಾಸ್ಟರ್ ಹಿರಣ್ಣಯ್ಯನವರು ಪುನರುಜ್ಜೀವನಗೊಳಿಸಿ ತಮ್ಮ ಕಲೆಯ ಮೂಲಕ ಜನಜಾಗೃತಿ ಉಂಟುಮಾಡುತ್ತಿದ್ದಾರೆ. ಮಾಸ್ಟರ್ ಹಿರಣ್ಣಯ್ಯನವರ ಮಾತಿನಲ್ಲೇ ಹೇಳುವಂತೆ "ಧನ ಎಂದು ಬಡಕೊಳ್ಳುವುದಕ್ಕಿಂತ ನಾಲ್ಕು ಜನ ಸಂಪಾದಿಸು" ಎಂಬ ಹಿತವಚನ, ಜನ ಸಮಾಜಕ್ಕೆ ಅನ್ನ ನೀಡುವ ಶಕ್ತಿಯೂ ಅಲ್ಲದೆ ಕಲೆಯ ಪ್ರೇರಕರೂ ನಿರ್ಮಾಪಕರೂ ಆಗುವರೆಂಬುದನ್ನು ತೋರಿಸುತ್ತದೆ. ಇವರ ಪ್ರಯತ್ನ ಸದಾ ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಹೆಚ್. ಮುಗುವಾಳಪ್ಪ,
ದೊಡ್ಡಬಳ್ಳಾಪುರ.

ನೀವೇನು ಹೇಳುತ್ತೀರಿ ?

(೫ನೇ ಪುಟದಿಂದ)

ಣಗಳು ಶೇ|| 78, ಪಡುಬಿದಿರೆಯ ನಾರಾಯಣ ಸೆಟ್ಟಿ, ಗುಣಗಳು ಶೇ|| 68 (ಇವರು ಕೊನೆಯ ಸಚಿವರ ಕೋಮಿಗೇ ಸೇರಿದವರು).

ಇವರುಗಳಿಗೇಕೆ ಸ್ಥಳ ಸಿಕ್ಕಲಿಲ್ಲ? ವಿಜಾತಿಯೇ? ಅಥವಾ ತಮ್ಮವರಿಗಿಂತಲೂ ಇವರು ಹೆಚ್ಚು ಬುದ್ಧಿವಂತರೆಂದೆ? ಏನು ಕಾರಣ?

ನೀವೇ ಶೋಧಿಸಿ ಕಾರಣವನ್ನು.

o o o

ಗೋರಖಪುರ (ಉ. ಪ್ರದೇಶ) ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ, 2) ಬಿಹಾರಿನ ಕಾಂಗ್ರೆಸ್ ಪತ್ರಿಕೆ "ನವರಾಷ್ಟ್ರ" 3) ಪಿ.ಎಸ್.ಪಿ.ಯವರ ಪರಿಶೀಲನಾ ಸಮಿತಿಯ ವರದಿ ಮತ್ತು 4) ದೇವರಾಯಿಯ ಸಂತ ರಾಘವದಾಸ್ ಕಾಲೇಜಿನ ಪ್ರಿನ್ಸಿಪಾಲ್ ಅವರುಗಳು [ಇವರಲ್ಲಾರೂ ಕಮ್ಯೂನಿಸ್ಟರಿಲ್ಲ, ಕಮ್ಯೂನಿಸ್ಟ್ ಸಹಚರರೂ ಇಲ್ಲ, ಅವರಂಥ ಕಟು ವಿಮರ್ಶಕರೂ ಇಲ್ಲ]. ಉತ್ತರ ಪ್ರದೇಶ, ಮತ್ತು ಬಿಹಾರ್‌ನಲ್ಲಿಯ ಆಹಾರ ಪರಿಸ್ಥಿತಿಯ ಬಗ್ಗೆ ಹೇಳಿರುವುದು ಹೀಗಿದೆ:

● ನಾನು ಹೋದಲ್ಲೆಲ್ಲ ಸಹಸ್ರಾರು ಜನ ಹಸಿದ ಗಂಡಸರು, ಹೆಂಗಸರು ನನ್ನನ್ನು ಮುತ್ತಿನಿಂತರು. ಶೇ|| 90ರಷ್ಟು ಜನರು ಇಲ್ಲಿ ಆಹಾರಾಭಾವಕ್ಕೊಳಗಾಗಿದ್ದಾರೆ. ಒಂದೇ ಸಮನೆ 3-4 ದಿನಗಳವರೆಗೂ ಅವರು ಆಹಾರವಿಲ್ಲದೆ ಇರಬೇಕಾಗುತ್ತಿದೆ. ಕೆಲವು ಲಾಭಕೋರರು ಇವರನ್ನೆಲ್ಲ ಉಪವಾಸಕ್ಕೆ ತಳ್ಳುತ್ತಿರುವಾಗ ಅಧಿಕಾರಿ ವರ್ಗ ಎಲ್ಲಿ ಮಲಗಿದೆಯೋ ಯಾರಿಗೂ ಗೊತ್ತಾಗದು.

● ಆಹಾರ ಧಾನ್ಯಗಳನ್ನು ಸಾಗಿಸುತ್ತಿದ್ದ ಆರು ಎತ್ತಿನ ಬಂಡೆಗಳನ್ನು ಕೊಳ್ಳೆ ಹೊಡೆಯಲಾಯಿತು. ಹಳ್ಳಿಯೊಂದರಲ್ಲಿ ಹಸಿದ ಹೆಂಗಸೊಬ್ಬಳು ಕುದುರೆಯ ಮೇಲೆ ಸಾಗಿಸಲ್ಪಡುತ್ತಿದ್ದ ಅಟ್ಟಾವನ್ನು ಲೂಟ ಮಾಡಿದಳು.

● ಹಸಿದ ಹೆಂಗಸರು, ಮಕ್ಕಳು ನೆಲಕ್ಕೆ ಬಿದ್ದ ಮಣ್ಣು, ಕಲ್ಲು, ಕೊಳೆ ತುಂಬಿದ್ದ ಕಾಕಂಬಿಯನ್ನು ನೆಕ್ಕಿನೆಕ್ಕಿ ತಿನ್ನುವುದನ್ನು ನೋಡಿದೆವು.

● ಕುದಾನ್ ಪುಡಿ ಕೊಳೆತಾಗ ಅದು ಅಮಲೇರಿಸುವ ಶಕ್ತಿಯನ್ನು ಹೊಂದುತ್ತದೆ. ಯಾರಾದರೂ ಇದನ್ನು ತಿಂದರೆ ಅವರ ಅವಸ್ಥೆ ಹುಚ್ಚನಂತಾಗುತ್ತದೆ. ಹೀಗೆ ನನ್ನೂರಿನ ಮೂವರು ವಿದ್ಯಾರ್ಥಿಗಳು ಹುಚ್ಚರಾದರು. ಜನರಿಗೆ ತಿನ್ನಲು ಇನ್ನೇನು ಇಲ್ಲದಿದ್ದರೆ ಏನು ತಾನೆ ಮಾಡಿಯಾರು?

ಇದು ಉತ್ತರ ಪ್ರದೇಶದ ಆಹಾರ ಪರಿಸ್ಥಿತಿ. ಉತ್ತರ ಪ್ರದೇಶದ ಸಚಿವ ಸಂಪುಟದ ಮೇಲಂತೂ ಬೇಕಾದಷ್ಟು ಗಂಭೀರವಾದ ಆರೋಪಗಳಿವೆ. ದಿನಕ್ಕೊಂದು ಬಗೆಯ ಸುದ್ದಿ ಅಲ್ಲಿಯ ಸರ್ಕಾರವಾಗಲಿ, ಕೇಂದ್ರವಾಗಲಿ, ಕಾಂಗ್ರೆಸ್ ಪಕ್ಷವಾಗಲಿ ಎಲ್ಲವೂ ಮೂಕವಾಗಿವೆ.

ಕೇರಳದ ವಿಚಾರದಲ್ಲಿ ಅನಗತ್ಯವಾದ ಕೋಲಾಹಲವನ್ನೆಬ್ಬಿಸುವ ಕಾಂಗ್ರೆಸಿಗರು ಸಾಯುತ್ತಿರುವ ಈ ಜನರ ವಿಷಯವಾಗಿ ಏನು ಹೇಳುತ್ತಾರೆ?

—ಪ್ರಶ್ನಾರ್ಥಿ

ಕೇರಳದಲ್ಲೂ ಚುನಾವಣೆಗಳನ್ನು ನಡೆಸಲು ಸಿದ್ಧ

[ಮೊದಲನೇ ಪುಟದಿಂದ]

ನಷ್ಟವಾಗಿರುವುದರಿಂದ ತಿರುಗಿ ಚುನಾವಣೆ ಆಗಬೇಕೆಂದು ಕಾಂಗ್ರೆಸ್, ಪಿ.ಎಸ್.ಪಿ. ಮತ್ತಿತರ ಪ್ರತಿಪಕ್ಷಗಳು ಹೇಳತೊಡಗಿವೆ.

ಜನರ ಬೆಂಬಲ ನಷ್ಟವಾಗಿಲ್ಲ, ಹೆಚ್ಚಾಗಿದೆ ಎಂದು ದೇವಿಕುಳಂ ಚುನಾವಣೆ ತೋರಿಸಿಕೊಟ್ಟಿದೆ. ನಷ್ಟವಾಗಿದೆಯೆಂದು ಪ್ರತಿಪಕ್ಷಗಳು ಹೇಳುವುದರಿಂದ ಅದನ್ನು ಒಪ್ಪಿಕೊಳ್ಳಬೇಕೆ?

ಆಳುವ ಪಕ್ಷಕ್ಕೆ ಜನರ ಬೆಂಬಲ ನಷ್ಟವಾಗಿದೆ ಎಂದು ಪ್ರತಿ ಪಕ್ಷಗಳು ಹೇಳುವಾಗಲೆಲ್ಲ ಸಾರ್ವತ್ರಿಕ ಚುನಾವಣೆ ನಡೆಸಬೇಕೆ? ಹಾಗಾದರೆ ನಾವು ಅದಕ್ಕೂ ತಯಾರಿದ್ದೇವೆ. ಆದರೆ ಕೇರಳಕ್ಕೆ ಒಂದು ತತ್ವ, ಇತರ ರಾಜ್ಯಗಳಿಗೆ ಬೇರೊಂದು ತತ್ವ ಮಾತ್ರ ಇರಕೂಡದು. ಆಂಧ್ರದಲ್ಲಿ ಶ್ರೀ ಸಂಜೀವರೆಡ್ಡಿಯವರ ಸರಕಾರಕ್ಕೆ ಜನರ ಬೆಂಬಲ ನಷ್ಟವಾಗಿದೆ ಎಂದು ಅಲ್ಲಿನ ಮುಖ್ಯ ವಿರೋಧಿ ಪಕ್ಷವಾದ ಕಮ್ಯೂನಿಸ್ಟ್ ಪಾರ್ಟಿಯ ನಾಯಕ ಕಾ|| ಸುಂದರಯ್ಯ ಹೇಳಿದರೆ ಆಂಧ್ರದಲ್ಲೊಂದು ಸಾರ್ವತ್ರಿಕ ಚುನಾವಣೆ ನಡೆಸುವರೆ? ಪಶ್ಚಿಮ ಬಂಗಾಲದ ಕಾಂಗ್ರೆಸ್ ಮಂತ್ರಿಮಂಡಲದ ಸಚಿವರೊಬ್ಬರಾದ ಸಿದ್ಧಾರ್ಥರೇ ರಾಜಿ ಕೊಟ್ಟರು. ಪಂಥಾಹ್ವಾನದೊಂದಿಗೆ ತಿರುಗಿ ಚುನಾವಣೆಗೆ ನಿಂತು, ಮೊದಲಿಗಿಂತ ಹೆಚ್ಚು ಓಟು ಪಡೆದು ಕಾಂಗ್ರೆಸ್ ಉಮೇದ್ವಾರಿಯನ್ನು ಸೋಲಿಸಿದರು. ಶ್ರೀ ಬಿ. ಸಿ. ರಾಯ್ ಸರಕಾರಕ್ಕೆ ಜನರ ಬೆಂಬಲ ನಷ್ಟವಾಗಿದೆಯೆಂದು ಇದು ವ್ಯಕ್ತಪಡಿಸುತ್ತದೆಂದು ಪ್ರತಿಪಕ್ಷದ ನಾಯಕ ಕಾ|| ಜ್ಯೋತಿ ಬಸು ಹೇಳಿದರೆ ಅಲ್ಲೊಂದು ಸಾರ್ವತ್ರಿಕ ಚುನಾವಣೆ ನಡೆಯುವುದೆ? ಹಾಗೆಯೇ ಬೊಂಬಾಯಿಯಲ್ಲಿ, ಉತ್ತರ ಪ್ರದೇಶದಲ್ಲಿ, ಪ್ರತಿಪಕ್ಷಗಳು ಕೇಳಿದರೆ ತಿರುಗಿ ಚುನಾವಣೆ ನಡೆಯುವುದೆ?

ಆದರೆ ಇದರಲ್ಲೊಂದು ತಮಾಷೆಯಿದೆ. ದಿಲ್ಲಿಯಲ್ಲಿ ಶ್ರೀ ಪಟ್ಟಂಥಾನು ಪಿಳ್ಳೆಯವರನ್ನು ಪತ್ರಿಕಾ ಪ್ರತಿನಿಧಿಗಳು ಕಾಂಗ್ರೆಸ್, ಪಿ. ಎಸ್. ಪಿ., ಮುಸ್ಲಿಂ ಲೀಗ್ ಮತ್ತಿತರ ಒಡನಾಡಿಗಳೆಲ್ಲ ಸೇರಿ ಸರಕಾರ ರಚಿಸಲು ಸಾಧ್ಯವಿದೆಯೇ? ಎಂದು ಕೇಳಿದರು. ಅದನ್ನು ನಾನು ಹೇಳಲಾರೆ: ಅದು ಪಿ ಎಸ್. ಪಿ. ಯ ರಾಷ್ಟ್ರೀಯ ಮಂಡಲ ನಿರ್ಣಯ ಮಾಡಬೇಕಾಗಿದೆ ಎಂದು ಥಾನುಪಿಳ್ಳೆ ಉತ್ತರ ಕೊಟ್ಟರು. ಮದ್ರಾಸಿನ ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ದಾಮೋದರ ಮೆನೋನ್‌ರವರನ್ನು ಪತ್ರಿಕಾ ಪ್ರತಿನಿಧಿಗಳು ಕೇಳಿದರು: ಕಮ್ಯೂನಿಸ್ಟರನ್ನು ಸೋಲಿಸಿ ಕಾಂಗ್ರೆಸ್ ಸರಕಾರ ರಚಿಸಲು ಬೇಕಾದಷ್ಟು ಬಹುಮತ ನಿಮಗೆ ದೊರಕುವುದೆ? ಅದನ್ನೀಗ ಹೇಳಲು ಸಾಧ್ಯವಿಲ್ಲ ಎಂದು ಉತ್ತರ ಬಂತು!

ಅಧಿಕಾರದಲ್ಲಿ ಇರಬೇಡವೆಂದು ಜನರು ತೀರ್ಪುಕೊಟ್ಟ ನಂತರವೂ ಅಧಿಕಾರಕ್ಕೆ ಅಂಟಿಕೊಂಡಿರಬೇಕೆಂದು—ಇತರ ಕೆಲವು ಪಾರ್ಟಿಗಳ ನಾಯಕರಂತೆ—ನಮಗೆ ಆಗ್ರಹವಿಲ್ಲ.

ಘಟನೆಯ ಪ್ರಕಾರ ಚುನಾವಣೆ ನಡೆಯತಕ್ಕ ಕೆಲವು ಸಂದರ್ಭಗಳಿವೆ. ಆಗ ಚುನಾವಣೆ ನಡೆಯುವುದು. ಆ ತನಕ ಈ ಪ್ರತಿಪಕ್ಷಗಳು ಸ್ವಲ್ಪ ತಾಳ್ಮೆಯಿಂದ ವರ್ತಿಸಬೇಕೆಂದು ಕೇಳಿಕೊಳ್ಳುತ್ತೇವೆ. ಅದು ಅಷ್ಟು ದಿನ ಕಾದಿರಲಾರದಿದ್ದರೆ ಬೇಡ; ಬೇಗೆ ಕೇರಳದ ಆದ್ಯಂತ ಪಂಚಾಯತ್, ಮುನ್ಸಿಪಾಲಿಟಿ ಮುಂತಾದ ಚುನಾವಣೆಗಳು ನಡೆಯಲಿವೆ. ಅವುಗಳಲ್ಲಿ ಸ್ಪರ್ಧಿಸಿ ಯಾವ ಪಕ್ಷಕ್ಕೆ ಎಷ್ಟು ಬೆಂಬಲವಿದೆ ಎಂದಾದರೂ ಪರೀಕ್ಷಿಸೋಣ. ಅಲ್ಲಿನವರೆಗಾದರೂ ಸಹನೆ ಇರಬಾರದೆ?"

ಪತ್ರಿಕಾ ಮಾರಾಟದ ಹಕ್ಕಿಗೆ ಧಕ್ಕೆ

[ಮೊದಲನೆ ಪುಟದಿಂದ]

ದು ತಿಳಿಯದ ಪತ್ರಿಕಾ ವಿಕ್ರಯಸ್ಥನಿಗೆ ದಿಗ್ಭ್ರಮೆಯಾಯಿತು. ಡ್ರೈವರ್ ಸೋದರಿಬ್ಬರಿಗೂ ವೀರಣ್ಣಗೌಡರು ಯಾವ ಬಗೆಯ ಅನ್ಯಾಯವನ್ನೂ ಮಾಡಿರಲಿಲ್ಲ. ಆದರೆ ಆ ಡ್ರೈವರುಗಳ ಮಾತೇ ಕಾರಣ ಹೇಳಿತು. ವೀರಣ್ಣಗೌಡರಿಗೆ ಅವರಿತ್ತ ಎಚ್ಚರಿಕೆಗಳು ಮೂರು ಬಗೆಯಾಗಿವೆ.

● "ದೊಡ್ಡಬಳ್ಳಾಪುರದ ಡಾ|| ಗೋರಿಯವರು ಸಭ್ಯ ಮನುಷ್ಯರು ಅವರ ಬಗ್ಗೆ 'ಜನಶಕ್ತಿ'ಯಲ್ಲಿ ಯಾಕೆ ಲೇಖನಗಳನ್ನು ಲೇಖನಗಳನ್ನು ಪ್ರಕಟಿಸುತ್ತೀರಿ? ಇನ್ನು ಮೇಲೆ ಪ್ರಕಟಿಸಕೂಡದು."

● ಜನಶಕ್ತಿ ಮತ್ತು ಸೋವಿಯತ್ ದೇಶ ಇವುಗಳನ್ನು ನನಗೆ (ಜೀವನಸಿಂಗನಿಗೆ) ಉಚಿತವಾಗಿ ಓದಲು ಕೊಡಬೇಕು

● ಜನಶಕ್ತಿಯಲ್ಲಿ ಬರುವ ವಿಷಯಗಳನ್ನು ಕೂಗಿ ಹೇಳಬೇಡ.

ಡಾಕ್ಟರ್ ಗೋರಿಯವರಿಗೂ ಈ ಡ್ರೈವರನಿಗೂ ಏನು ಸಂಬಂಧವೋ ತಿಳಿಯದು. ಅವರು ಈ ದುಷ್ಕೃತ್ಯವನ್ನು ಕಂಡು ಇವರ ಗೋರಿಯವರ ಬಾಡಿಗೆಯ ಬಂಟರಾಗಿರಲು ಸಾಕು ಎಂದೆನಿಸುತ್ತದೆ.

ಈ ಹೊಡೆದಾಟ ಪೂರ್ವಯೋಜಿತವಾಗಿತ್ತೆನ್ನುವುದಕ್ಕೆ ಇಲ್ಲಿ ಸ್ಪಷ್ಟ ಸಂದೇಹಗಳಿವೆ.

ವೀರಣ್ಣ ಗೌಡರಿಗೆ ಆಗಾಗ ಈ ಡ್ರೈವರುಗಳು ಕಿರುಕುಳವನ್ನು ಕೊಡುತ್ತಲೇ ಇದ್ದರಂತೆ. 'ಪತ್ರಿಕೆ ಇಲ್ಲಿ ಮಾರಬೇಡ, ಮಾರಿದರೆ ಹೊಡೆಯುತ್ತೇವೆ' ಎಂದು ಮುಂತಾಗಿ ಎಚ್ಚರಿಕೆ ನೀಡಿದ್ದರಂತೆ. ಇಂಥ ಸಮಯವನ್ನೇ ಸಾಧಿಸುತ್ತಿದ್ದ ಅವರು ಕಾಲುಕೆರೆದು ವೀರಣ್ಣಗೌಡರನ್ನು ಥಳಿಸಿದರೆಂದು ಗೊತ್ತಾಗಿದೆ. ತಮ್ಮ ಗಾಯಗಳ ತಪಾಸಣೆಗಾಗಿ ವಿಕ್ಟೋರಿಯಾ ಸರ್ಕಾರಿ ಆಸ್ಪತ್ರೆಗೆ ಹೋದಾಗ್ಗೆ ಕೂಡಲೆ ಅಲ್ಲಿಯ ಅಧಿಕಾರಿಗಳು "ನೀವು ವೀರಣ್ಣಗೌಡರು ತಾನೆ?" "ಅವರ ಮೇಲೆ ಕೇಸು ಹಾಕುತ್ತೀಯಾ?" ಎಂದು ಮುಂತಾಗಿ ಕೇಳಿದರಂತೆ. ಈ ಸಮಾಚಾರ ಅವರಿಗೆ ತಕ್ಷಣವೆ ಹೇಗೆ ಗೊತ್ತಾಗಿತ್ತು? ಯಾರು ತಿಳುಹಿಸದ್ದರವರಿಗೆ? ಕಣ್ಣಾರೆ ಈ ಗೂಂಡಾತನವನ್ನು ಕಂಡ ಪೋಲೀಸರು ಪುಂಡರ ಮೇಲೆ ಕ್ರಮತೆಗೆದುಗೊಳ್ಳದೆ ಮೌನವಾಗಿದ್ದಾರೆ. ಇದೀಗ ವೀರಣ್ಣಗೌಡರೆ ದೂರು ಕೊಟ್ಟಿರುವರೆಂದು ತಿಳಿದಿದೆ.

ಡಾ|| ಗೋರಿಯರ ವಿಚಾರ ಪತ್ರಿಕೆಯಲ್ಲಿ ಬಂದರೆ ಪತ್ರಿಕಾ ಮಾರಾಟಗಾರರನ್ನು ಹೊಡೆಯಲು ಇವರಾರು? ಬಸ್ ಸ್ಟ್ಯಾಂಡ್ ಅಂದ್ರೆ ತಮ್ಮ ಹಿರಿಯರ ಆಸ್ತಿಯೆಂಬಂತೆ ವರ್ತಿಸುವ ಇಂಥವರ ಬಗ್ಗೆ ರೋಡ್ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳು ಗಮನಕೊಡದಿದ್ದರೆ ನಾಳೆ ಪ್ರಯಾಣಿಕರಿಗೂ ತಮ್ಮ ರಕ್ಷಣೆಯ ಬಗ್ಗೆ ಭೀತಿಯುಂಟಾದೀತು.

ಇದು ಕೇವಲ ಡ್ರೈವರ್ ಮತ್ತು ಪತ್ರಿಕಾವಿಕ್ರಯಸ್ಥ ಇವರ ವೈಯುಕ್ತಿ ಪ್ರಶ್ನೆಯಲ್ಲ. ಪತ್ರಿಕೆಗಳನ್ನು ಮಾರಾಟ ಮಾಡುವ ಮೂಲಭೂತ-ಸ್ವಾತಂತ್ರ್ಯಕ್ಕೇ ಧಕ್ಕೆ ಬರುತ್ತಿದೆಯೆಂಬ ಭಾವನೆ ಬಂದರೆ ಆಶ್ಚರ್ಯವೇನಿಲ್ಲ. ಸರಕಾರವು ಇಂಥ ಪುಂಡಾಟಿಕೆಗಳನ್ನು ಗಮನಿಸಿ ಕ್ರಮ ಕೈಕೊಳ್ಳಬೇಕು.

ಪಾರ್ಲಿಮೆಂಟಿನಲ್ಲಿ ಆರ್. ಕೆ. ರಾಮಧ್ಯಾನಿಯವರ ಕಿತಾಪತಿಯ ಪ್ರತಿಧ್ವನಿ

[ಮೊದಲನೇ ಪುಟದಿಂದ]

ಸಿಕ್ಕಿರುವಾಗ ಅವರನ್ನು ದಂಡನೆಗೆ ಗುರಿಪಡಿಸದೆ ಬಿಡಬಾರದು ಎಂದು ಕಾ|| ಭೂಪೇಶಗುಪ್ತರ ಅಭಿಪ್ರಾಯವೆಂದು ತಿಳಿದಿದೆ.

ಶ್ರೀ ರಾಮಧ್ಯಾನಿಯವರ ವಿಚಾರ ಇಷ್ಟರಲ್ಲೇ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಗೃಹ ಮಂತ್ರಿಗಳು ಪ್ರಧಾನ ಮಂತ್ರಿಯವರೊಂ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯುವ ಮೊದಲೇ ಸರಕಾರ ಏನು ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನೂ ಚರ್ಚಿಸಿದರೆಂದೂ ಗೊತ್ತಾಗಿದೆ.

Two Important Soviet Periodicals

NEW TIMES

Published every week the Journal is devoted to questions of the foreign policies of the U.S.S.R. and other countries and to current events in International Life.

NEW TIMES keeps the reader abreast of events in various countries.

Perceptive travelogues and thought-provoking comments are its special features.

Subscription rates:

Rs. 6/- Yearly.
Rs. 3/- Half yearly.
Np. 19 Single Copy.

MOSCOW NEWS

MOSCOW NEWS, the illustrated bi-weekly newspaper published from Moscow, carries news about the social, political, economic and cultural life in the Soviet Union. Its contributors are prominent figures and authorities in diverse branches of Soviet Life.

Subscription Rates:

Rs. 8/- Yearly.
Rs. 4/- Half Yearly.
Np. 9 Single Copy.

SUBSCRIBERS WILL RECEIVE COPIES BY AIR MAIL

Subscriptions accepted at:

VIO MEZDUNARODNAYA KNIGA, Moscow 200, U.S.S.R.

New Century Book House, C. 17, Majestic Circle, Bangalore.
People's Book House, Opp. Jagan Mohan Palace, Mysore.
M/s. Venkataramanayya & Sons, Vidyanidhi Buildings, Mysore.
Prabhath Book House, Mangalore.

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone 3810